## ದಸರಾ ಬಹುಭಾಷಾ ಕವಿಗೋಷ್ಠಿ - 2010

# ಕವನ ದೀಪಿಕಾ

[ಬಹುಭಾಷಾ ಕವನ - ಚುಟುಕುಗಳ ಸಂಕಲನ]

ಸಂಪಾದಕರು :
ಮುಲ್ಲೇಂಗಡ ಮಧೋಶ್ ಪೂವಯ್ಯ
ಅಧ್ಯಕ್ಷರು



ಕಾವೇರಿ ದಸರಾ ಸಮಿತಿ (ರಿ), ಗೋಣಿಕೊಪ್ಪ
(ಕನ್ನಡ ಸಂಸ್ಕೃತಿ ಇಲಾಖೆ ಪ್ರಾಯೋಜಿತ)
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ
ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ವಿರಾಜಪೇಟೆ

## ದಸರಾ ಬಹುಭಾಷಾ ಕವಿಗೋಷ್ಠಿ - 2010

# ಕವನ ದೀಪಿಕಾ

[ಬಹುಭಾಷಾ ಕವನ - ಚುಟುಕುಗಳ ಸಂಕಲನ]


ಸಂಪಾದಕರು :

ಮುಲ್ಲೇಂಗಡ ಮಧೋಶ್ ಪೂವಯ್ಯ

ಅಧ್ಯಕ್ಷರು



ಆಯೋಜಕರು :

ಕಾವೇರಿ ದಸರಾ ಸಮಿತಿ (ರಿ), ಗೋಣಿಕೊಪ್ಪ

(ಕನ್ನಡ ಸಂಸ್ಕೃತಿ ಇಲಾಖೆ ಪ್ರಾಯೋಜಿತ)

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ವಿರಾಜಪೇಟೆ

**ಕವನ ದೀಪಿಕಾ,** ಕವನ - ಚುಟುಕುಗಳ ಸಂಕಲನ, ತಾರೀಕು 13-10-2010 ರಂದು ದಸರಾ ಜನೋತ್ಸವದ ಅಂಗವಾಗಿ ಕಾವೇರಿ ದಸರಾ ಸಮಿತಿ (ರಿ), ಗೋಣಿಕೊಪ್ಪ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಈ ಮೂರು ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ನಡೆದ 'ದಸರಾ ಬಹು ಭಾಷಾ ಕವಿಗೋಷ್ಠಿ 2010' ಇಲ್ಲಿ ವಾಚಿಸಿದ ಕವನ, ಚುಟುಕುಗಳ ಸಂಗ್ರಹ.

ಮುದ್ರಣ : 2010

ಪ್ರತಿಗಳು : 500-0

© ಹಕ್ಕುಗಳು ಕಾಯ್ದಿರಿಸಲಾಗಿದೆ

ಮುದ್ರಣ :
**ಶ್ರೀ ಕೃಷ್ಣ ಕಂಪ್ಯೂಟರ್ಸ್ ಅಂಡ್ ಪ್ರಿಂಟರ್ಸ್,**
ಪೂಜ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ
ಮಡಿಕೇರಿ
Mob : 94481 35592, 08272 - 224919

# ಅಧ್ಯಕ್ಷರ ನುಡಿ

ಕೊಡಗಿನ ಸಾಹಿತ್ಯ ಶ್ರೀಮಂತಗೊಳಿಸುವ ಪ್ರಯತ್ನ ಹಲವಾರು ವರ್ಷಗಳಿಂದ ಸತತವಾಗಿ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಗೋಣಿಕೊಪ್ಪಲು ದಸರಾ ಜನೋತ್ಸವದ ಸಂದರ್ಭದಲ್ಲಿ ಕಾವೇರಿ ದಸರಾ ಸಮಿತಿ ಮತ್ತು ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಬಹುಭಾಷಾ ದಸರಾ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲು ತೀರ್ಮಾನಿಸಿ ನಮ್ಮ ಸಹಕಾರವನ್ನ ಬಯಸಲಾಯಿತು. ನಾವು ಸರ್ವ ಸದಸ್ಯರು ಈ ಒಂದು ಕಾರ್ಯಕ್ಕೆ ಒಪ್ಪಿಗೆ ನೀಡಿ ನಮ್ಮ ಸಹಭಾಗಿತ್ವವನ್ನ ಈ ದಸರಾ ಕವಿಗೋಷ್ಠಿಗೆ ನೀಡುವುದರ ಮೂಲಕ ಕೊಡಗಿನ ಸಾಹಿತ್ಯಕ್ಕೆ ಒಂದು ಒಳ್ಳೆಯ ಕೊಡುಗೆಯನ್ನು ನೀಡಲು ತೀರ್ಮಾನಿಸಿದೆವು.

ಈ ಹಿನ್ನಲೆಯಲ್ಲಿ 'ಕವನ ದೀಪಿಕಾ' ಎಂಬ ಈ ಬಹುಭಾಷಾ ಕವನ, ಚುಟುಕುಗಳನ್ನೊಳಗೊಂಡ ಸುಂದರ ಸಂಕಲನವನ್ನು ಹೊರತರುತ್ತಿದ್ದೇವೆ. ಇದು ಕೊಡಗಿನ ಸಾಹಿತ್ಯ ಲೋಕಕ್ಕೆ ಒಂದು ಅಮೂಲ್ಯ ಕೃತಿಯಾಗಿ ಹೊರಬರಲಿ ಎಂಬುದು ನಮ್ಮ ಆಶಯ. ದಸರಾ ಜನೋತ್ಸವದ ಅಂಗವಾಗಿ ಗೋಣಿಕೊಪ್ಪಲುವಿನಲ್ಲಿ ನಡೆಯುತ್ತಿರುವ ದಸರಾ ಬಹುಭಾಷಾ ಕವಿಗೋಷ್ಠಿ 2010 ಅತ್ಯಂತ ಸುಂದರವಾಗಿ ನಡೆಯಲಿ ಎಂದು ಆಶಿಸುತ್ತೇನೆ.

ವಂದನೆಗಳೊಂದಿಗೆ

**ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ**
ಅಧ್ಯಕ್ಷರು
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

# ನಿಮ್ಮೊಂದಿಗೆ

*ಮಾನ್ಯರೇ ಸಪ್ರೇಮ ನಮಸ್ಕಾರಗಳು,*

ಕೊಡಗಿನಲ್ಲಿ ಸಾಹಿತ್ಯ ಚಟುವಟಿಕೆಗಳು ಬಹುತೇಕ ಕಡಿಮೆ. ಅದರಲ್ಲೂ ಕವಿಗೋಷ್ಠಿ ವರ್ಷಕ್ಕೆ ಒಂದೋ ಎರಡೋ. ನಮ್ಮಲ್ಲಿರುವ ಕವಿಗಳಿಗೆ ವೇದಿಕೆ ಒದಗಿಸಿ ಪ್ರತಿಭೆಯನ್ನು ಪ್ರಕಾಶಿಸಲು ಅವಕಾಶಗಳು ಕಡಿಮೆ. ಹೊರ ಜಿಲ್ಲೆಗಳಲ್ಲಿ ಹಲವಾರು ಸಂಘ ಸಂಸ್ಥೆಗಳು, ಹಲವು ಸಂದರ್ಭಗಳಲ್ಲಿ ಕವಿಗೋಷ್ಠಿ, ಚುಟುಕು ಕವಿಗೋಷ್ಠಿ ಇಂತಹ ಸಾಹಿತ್ಯ ಪರ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತವೆ. ಆದರೆ ಕೊಡಗಿನಲ್ಲಿ ಇಂತಹ ಕಾರ್ಯಕ್ರಮಗಳು ನಡೆಸಿದರೆ ಭಾಗವಹಿಸುವಿಕೆಯೂ ವಿರಳ, ಕೇಳುವ ಕಿವಿಗಳಂತೂ ತುಂಬಾ ವಿರಳ. ಇಂತಹ ಸಂದರ್ಭದಲ್ಲಿ ಒಂದೆರಡು ಸಂಘ ಸಂಸ್ಥೆಗಳು ಕಾರ್ಯಕ್ರಮ ನಡೆಸುವ ಪ್ರಯತ್ನಕ್ಕೆ ಕೈಹಾಕುತ್ತಿವೆ.

ಈ ನಿಟ್ಟಿನಲ್ಲಿ ಕಳೆದ ವರ್ಷದಿಂದ ಕಾವೇರಿ ದಸರಾ ಸಮಿತಿ ಹಾಗೂ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್‌ನ ಆಶ್ರಯದಲ್ಲಿ ಬಹುಭಾಷಾ ಕವಿಗೋಷ್ಠಿಯನ್ನು ದಸರಾ ಜನೋತ್ಸವದ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಯಿತು. ಅಂತೆಯೇ ಈ ವರ್ಷವೂ ಕೂಡ ಈ ಮಹತ್ಕಾರ್ಯವನ್ನು ನಡೆಸಲು ಮುಂದಾದಾಗ ನಮಗೆ ಕೈಜೋಡಿಸಿದವರು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ ಇವರು. ಈ ಸಂಸ್ಥೆಯ ಸಹಯೋಗದೊಂದಿಗೆ ನಾವುಗಳು 'ಕವನ ದೀಪಿಕಾ' ಎಂಬ ಈ ಸುಂದರ ಕವನ ಸಂಕಲನವನ್ನು ಹೊರತರಲು ಸಾಧ್ಯವಾಯಿತು. ಈ ದಿಶೆಯಲ್ಲಿ ಇವರ ಸಹಕಾರ ಬಹು ದೊಡ್ಡದು.

'ಕವನ ದೀಪಿಕಾ' ಈ ಸಂಕಲನದಲ್ಲಿ ಹಲವಾರು ಕವಿಗಳು ಬೇರೆ ಬೇರೆ ಭಾಷೆಯಲ್ಲಿ ತಮ್ಮ ಕವನ, ಚುಟುಕಗಳನ್ನು ಕಳುಹಿಸಿದ್ದು, ಅವುಗಳನ್ನು ಆಯ್ಕೆ ಸಮಿತಿಯ ಮುಂದಿಟ್ಟು ಅದರಲ್ಲಿ 40 ಕವಿಗಳ ಕವನ, ಚುಟುಕಗಳನ್ನು ಆಯ್ಕೆ ಮಾಡಲಾಯಿತು. ಇದರಲ್ಲಿ ಹಲವಾರು ಕವನಗಳು ಪ್ರಬುದ್ಧತೆಯಿಂದ ಕೂಡಿದ್ದು, ಇನ್ನು ಕೆಲವು ಸಾಧಾರಣ ತೃಪ್ತಿ ಪಡೆಯುವಂತಿದ್ದರೆ, ಇನ್ನು ಕೆಲವು ಕವನಗಳಿಗೆ ಇನ್ನಷ್ಟು ಅನುಭವದ ಅವಶ್ಯಕತೆ ಇದೆ.

ಸಾಹಿತಿಗಳಿಗೆ ವೇದಿಕೆ ಒದಗಿಸುವ ನಿಟ್ಟಿನಲ್ಲಿ ನಾವು ಈ ಕಾರ್ಯವನ್ನು ಮಾಡುತ್ತಿರುತ್ತೇವೆ. ಈ ಸಂದರ್ಭದಲ್ಲಿ ಭಾಗವಹಿಸಿದ ಎಲ್ಲಾ ಕವಿಗಳಿಗೆ ವಂದನೆಗಳು. ಅದೇ ರೀತಿ ಕವನದ ಆಯ್ಕೆ ಮಾಡುವಲ್ಲಿ ಹಾಗೂ ಕವಿಗೋಷ್ಠಿ ನಡೆಸುವಲ್ಲಿ ಸಹಕರಿಸಿದ ನಮ್ಮ ಸಮಿತಿಯ ಪ್ರಧಾನ ಕಾರ್ಯದರ್ಶಿ ಚಮ್ಮಟ್ಟೀರ ಪ್ರವೀಣ್, ಸಮಿತಿ ಸಂಚಾಲಕರುಗಳಾದ ಸಣ್ಣುವಂಡ ಕಿಶೋರ್ ನಾಚಪ್ಪ, ದಿನೇಶ್, ರಫೀಖ್ ಹಾಗೂ ಇತರ ಸರ್ವಸದಸ್ಯರುಗಳಿಗೆ ವಂದನೆಗಳನ್ನು ಅರ್ಪಿಸುತ್ತೇವೆ. ಕವಿಗೋಷ್ಠಿ ನಡೆಸಲು ಮುಖ್ಯ ಕಾರಣಕರ್ತರಾದ ಕಾವೇರಿ ದಸರ ಸಮಿತಿ (ರಿ) ಯ ಮಾನ್ಯ ಅಧ್ಯಕ್ಷರಾದ ಕೊಪ್ಪಿರ ಸನ್ನಿ ಸೋಮಯ್ಯ, ಕಾರ್ಯಾಧ್ಯಕ್ಷರಾದ ಬಿ.ಎನ್. ಪ್ರಕಾಶ್ ಹಾಗೂ ಸರ್ವ ಪದಾಧಿಕಾರಿಗಳಿಗೆ ನಮ್ಮ ವಂದನೆಗಲು

ಸಂಚಿಕೆಯನ್ನು ಹೊರತರಲು ಕಾರಣಕರ್ತರಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಐಮುಡಿಯಂಡ ರಾಣಿಮಾಚಯ್ಯ, ರಿಜಿಸ್ಟಾರ್ ವಿನೋದ್ ಚಂದ್ರ ಹಾಗೂ ಸರ್ವ ಸದಸ್ಯರುಗಳಿಗೆ ಹೃತ್ಪೂರ್ವಕ ವಂದನೆಗಳು. ಅಲ್ಪ ಸಮಯದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಮಡಿಕೇರಿಯ ಶ್ರೀ ಕೃಷ್ಣ ಕಂಪ್ಯೂಟರ್ಸ್ ಅಂಡ್ ಪ್ರಿಂಟರ್ಸ್‌ನ ಮಾಲೀಕರಾದ ಉನ್ನಿಕೃಷ್ಣ ಹಾಗೂ ಸಿಬ್ಬಂದಿಯವರಿಗೂ ವಂದನೆಗಳು.

'ಕವನ ದೀಪಿಕಾ' ಈ ಸಂಚಿಕೆಯನ್ನು ಅತ್ಯಂತ ಸಂತೋಷದಿಂದ ಸಂಪಾದಿಸಿ ತಮ್ಮ ಮುಂದಿಡುತ್ತಿದ್ದೇನೆ. ಮಾನ್ಯ ಸಹೃದಯಿ ಓದುಗರಾದ ತಾವುಗಳು ಸ್ವೀಕರಿಸಿ ಓದಿದಲ್ಲಿ ನಮ್ಮ ಶ್ರಮ ಸಾರ್ಥಕ ಹಾಗೂ ಕವಿಗಳಿಗೆ ನೀವು ನೀಡುವ ಬೆಂಬಲ, ತಮ್ಮ ಪ್ರೋತ್ಸಾಹ ನಮ್ಮೊಂದಿಗಿರಲೆಂದು ಬಯಸುತ್ತಾ,

ವಂದನೆಗಳೊಂದಿಗೆ,

ಸದಾ ಸಾಹಿತ್ಯ ಸೇವೆಯಲ್ಲಿ ತಮ್ಮವನೇ ಆದ

ಮುಲ್ಲೇಂಗಡ ಮಧೋಶ್ ಪೂವಯ್ಯ

ಅಧ್ಯಕ್ಷರು

ಕವಿಗೋಷ್ಠಿ ಸಮಿತಿ ಹಾಗೂ

ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್.

# ಮುಖ್ಯಮಂತ್ರಿಯಾಯಿತ್



ರಾಜಕೀಯ ಭವನ ವಿಧಾನಸೌಧ ಮಿಂಞಲ್
ಚಾಯಿಚಂದೋಳತ್ ಮಾಡ್‌ನ ಮದ್‌ಗೆರೆಲ್
ಕೊಡವ ಉಡ್‌ಪ್‌ಲ್ ಎಲಂಗಿಯಂಡ್
ಮಾಡ್‌ನ ಮಾಜನಡ ಮಿಂಞಲ್ ಬಾಷೆ ಪ್ರಮಾಣ ನಾನ್
ಮಾಗುರು ಇಗ್ಗುತ್ತಪ್ಪ - ಮಾತಾಯಿ ಕಾವೇರಿ
ಊರ್ ನಾಡ್‌ರ ದೇವಾನುದೇವತೆ
ನಾಡ್‌ರ ಮಾಜನಳ ಸಾಕ್ಷಿ ಬೆಚ್ಚಿತ್
ಈ ರಾಜ್ಯತ್‌ರ ಮುಖ್ಯಮಂತ್ರಿಯಾಯಿತ್

ಮಾಡ್‌ಚಿ ಸಮ್ಮಾನ ಕೊಡಗ್‌ರ ಮಾಜನ
ಕೊಡ್‌ತ ವಾಗ್ದಾನ ಕೊಡಗ್‌ಕ್ ವಿಶೇಷ ಪ್ಯಾಕೇಜ್
ಕೊಡವ ತಕ್ಕ್‌ನ ಎಂಟನೇ ಪರಿಛೇದಕ್
ಕೊಡವ ತಕ್ಕ್ ಸಂಸ್ಕೃತಿರ ರಕ್ಷಣೆ, ಜನಾಂಗಕ್ ಒತ್ತಾಸೆ
ಕೊಡಗ್‌ರ ರಸ್ತೆನ ಕಾಂಕ್ರೆಟ್ ರಸ್ತೆ ಮಾಡುವ
ಕೊಡಗ್‌ಕ್ ವಿಮಾನ ರೈಲ್ ಕೊಂಡಬಪ್ಪ
ಕೊಡಗ್‌ಲ್ ರೈತಂಗಡ ಸಾಲ ಮನ್ನಾ, ಪ್ರವಾಸೋದ್ಯಮತ್‌ನ ಬೊಳತ್‌ವ

ನಲ್ಲ ರಭಸತ್ ಪರ್‌ಂದಂಡಿಂಜ ತಕ್ಕ್ ಮಧ್ಯತೆ ಕೇಟತ್
ನೇರ ಗಂಟೆ ಏಳಾಚಿ ಏವ ಕಯ್ಯುಲೆಯಾ ಇಂಞೂ ನೀಕ್
ಮಕ್ಕಳ ಸ್ಕೂಲ್‌ಕ್ ಅಯಪಕ್ ನೇರಾಪ
ನಾಕ್ ಬೋಂಡಿಯಬ್ಬಕ್ ಕಾರ್ಬಾರ್ ಉಂಡ್‌ಂದೆಣ್ಣ್‌ವ
ಉದಯರಾಗ ನಾಡ ಪೊಣ್ಣ್‌ರ ಸ್ವರತ್

ಕೇಟದೇ ನೆಟ್ಟಿತೆಚ್ಚರಾನ ನಾಕ್ ಅರಿವಾಚಿ
ನಾನಿಚ್ಚನೇರ ಕಂಡದ್ ನಲ್ಲೋರ್ ಕನಚೀಂದ್

ಮುಲ್ಲೇಂಗಡ ಮಧೋಶ್ ಪೂವಯ್ಯ

(ಕೊಡವ ಭಾಷಾ ಕವನ)

# ಪೊನ್ನ್‌ರ ಮಣ್ಣ್ ಉಳ್ಳ ಕೊಡಗ್



ಈ ಮಣ್ಣ್ ನಾಡದ್‌ಂದೆಣ್ಣುವ ಎದೆಗಾರಿಕೆ ನಂಗಕಿರಡ್
ಇದ್ ಕೊಡವಡ ಮಣ್ಣ್, ನಂಗಡಜ್ಜಪ್ಪಂಗ ನೈಚಮಣ್ಣ್
ಅವು ಈ ಮಣ್ಣ್‌ಲ್ ಪುಟ್ಟ್‌ಚಿ, ಬಾಳ್‌ಚಿ, ಚತ್ತ್‌ ನಂಗಕ್ ಬುಟ್ಟಿತ್
ಮಣ್ಣ್‌ನ ಪೊನ್ನಾಯಿತ್ ಕಂಡಿತ್ ಪೊಮ್ಮಾಲೆ ಮಾಡ್‌ಚಿ ಅಜ್ಜಪ್ಪಂಗ
ಅತ್ತ್‌ಕಡಚಿಯಳ ಚಾಕ್‌ಚಿ ಪಾಲ್‌ಮೋರ್ ಕುಡ್‌ಚತ್
ಚೋಮ ಮಂಡನ ಪೂಜ್‌ಚಿ, ನೇಂಗಿ ನೊಗ ಕಟ್ಟಿ ಉತ್ತ್‌ತ್
ಚಾಣ ಗೊಬ್ಬರ, ಪಚ್ಚೆ ಎಲೆ, ಕಾಡ್‌ಮಣ್ಣ್ ಚಾಡ್‌ಚಿ ಮಣ್ಣ್‌ಕ್
ಬೊಳಿಯ, ದೊಡ್ಡಿ, ಸಣ್ಣ, ಕಳಮೆ ಬೊಳತಿತ್ ಉಂಡ್‌ತೇಗ್‌ಚಿ
ಉಂಡ್ ಕುಡುಚಿ ಪಾಡ್‌ಚಿ ಕಾವೇರಿ ಅವ್ವಯ್ಯನ ತೊತ್ತಿತ್ ಮಂದ್ ಮಾನಿಲ್
ಆಡ್‌ಚಿ ಇಗ್ಗುತಪ್ಪಂಡ ಕೋಲಾಟ ಕೊಪ್ಪಂದ್
ಶಕ್ತಿಕೋಲ್, ಪರೆಯಕಳಿರ ಪಡೆ ಆಟ್ ಪೊಯಿಲೇ ಪೊಯಿಳೇ
ಗ್ರಾಮ, ಊರ್, ನಾಡ್ ಒಂದಾಯಿ ಕೋಲ್‌ಪೂಜ್ಜಿ ಪಿರಿಂಜತ್ ಮಂದ್‌ಂಜಿ ಒಗ್ಗಟ್‌ಲ್
ಇಂದ್ ಪುತ್ತರಿ ಕದ್‌ಕ್ ಬೇಲ್‌ಲ್ ಬೊಳೆ ಇಲ್ಲತೆ ಆಚಿ
ಇಂಜಿಯಾಚಿ, ಕೆರೆ, ರೆಸಾರ್ಟ್ ಆಚಿ ಪೂಚಟ್ಟಿಂಜಿ ಕದ್ ಎಡ್‌ಪಕಾಚಿ
ಬೊಳಿಯ ದೊಡ್ಡಿರ ಕೂಳಿಲ್ಲತಾಚಿ ಪುತ್ತರಿ ಕೋಲ್‌ಕಳಿ ಇಲ್ಲತಾಪಕಾಚಿ
ಬೇಲ್‌ಲ್ ನೈಪಕ್ ನಡುಬಗ್ಗತಾಚಿ, ದಸರಾನಮ್ಮೆಕ್ ನೈಪಕಾಚಿ
ಕಾವೇರಮ್ಮೆ ಇಗ್ಗುತಪ್ಪಾ ನೋಟ್ ನೀಡ ಸಂಸಾರತ್‌ರ ಗತಿ
ಸೂರ್ಯ ಚಣ್ಣೂರ ಆಕಾಶ ಬದ್‌ಲಾಯಿಲೆ ನೀಡ ಮಕ್ಕ ಬದ್‌ಲಾಚಿ
ಇಂಗ್ಲೀಷ್ ಪಡ್‌ಚತ್ ಪಡಿಪುರ ಗುಟ್ಟ್ ಅರಿವ ಕೈಯತಾಚಿ
ಅಜ್ಜಪ್ಪಂಗಡ ಸಂಪಾದನೆನ ಮಾರ್‌ಚಿ ಓಡ್‌ಚಿ ಚಾಕರಿಕ್

ತಾಂಡ ಸ್ವಂತ ನೈಪುನ ಬುಟ್ಟಿತ್ ಇಂಞೊಬ್ಬಂಗಾಯಿತ್ ನೈಚತ್
ಅರಿಂಜತ್ ನೈಪುರ ಗುಟ್ಟ್, ಭೂಮಿಕಳಂದಂಡ್ ದಿಕ್ಕಿಲ್ಲತಾಚಿ
ಅಕ್ಕರಿಂಜತ್ ಅಜ್ಜಪ್ಪಂಗಡ ಸಾವಯವ ಕೃಷಿರ ಪೇರ್ಮೆನ
ಉಳ್ಳಮಣ್ಣ್‌ನ ಮಾರತಿ, ಆಳಿಲ್ಲೇಂದೆಣ್ಣತಿ ಪರಿಸರ ಪಾಳಾಕತಿ
ಇಂದ್ ಪಣತ್‌ರ ಆಸೆ ಚೆನ್ನಕರ್ಚಿಲ್ ದುಂಬ ಸಂಪಾದನೆರ ದುರಾಸೆ
ಆಸೆದುರಾಸೆಲ್ ಕನಿಚತ್ ಮಣ್ಣ್‌ಕ್ ಕಂಪೆನಿಗೊಬ್ಬರ
ನಲ್ಲಬೊಳೆತಾತ್, ಪಣತಾತ್ ಮಣ್ಣ್‌ರ ಸಾರ ಇಲ್ಲತಾಚಿ
ಕಂಪನಿ ಗೊಬ್ಬರತ್ ನಂಗ ನಂದಾಯಿಲೆ ಕಂಪೆನಿ ಪಣ ಮಾಡ್‌ಚಿ.
ಇಂದ್ ಕೃಷಿಕ್ ಯಂತ್ರ ಉಂಡ್ ತಂತ್ರ ಉಂಡ್ ಮೇಲ್‌ನನಕಂಡ
ಮಷಿನ್ ಕೆಲ್ಸಮಾಡಂಡು ಕೂಲಿ ಕೆಲ್ಸಕಾರ ಕಮ್ಮಿಯಾಂಡು
ಯಂತ್ರಕ್ ಕೆಲ್ಸ ಇಲ್ಲತೆ ಬೆಚ್ಚಕ ಯಂತ್ರಕ್ ಕಿಲಂಬು ಪುಡಿಕು
ತಡಿಎಣ್ಣುವ ಯಂತ್ರಕ್ ಬಗ್ಗಿತ್ ನೈಕಂಡು ಇಲ್ಲೇಂಗಿ ಚೋರೆ ಪಾಳಾಕು
ನರಿ, ಆನೆ, ಕಾಟಿ, ಕಡಮ, ಪುಟ್ಟಿತ್ ಓಡಿಕಳಿಪ ಮಣ್ಣ್
ಪೆರ್‌ಂಪಾಂಬು, ಕಾಳಿಂಗ ಸರ್ಪ ಬುಸ್‌ಕುಟ್ಟಿಯಂಡ್ ಪರಿವ ಮಣ್ಣ್
ಬೂಟಿ, ತೇಕ್, ಬೇಂಗೆ, ಚಾಂದ್‌ರ ಗಾಳಿ ಧೂಳ್‌ರ ಮಣ್ಣ್
ಭೀಮರಾಜ ಪಕ್ಷಿ ಬೀಪಿತೊಪ್ಪುವ ಪಕ್ಷಿಯಡ ಕಳಿ ಮಣ್ಣ್
ಕಕ್ಕಡ ಪದ್‌ನೆಟ್ಟ್‌ಕ್ ಮದ್ದ್ ತೊಪ್ಪು ಬೊಳೆವ ಮಣ್ಣಿದ್
ಆಯುದ ಪೂಜೆರ ಕೈಲ್‌ಪೊಳದ್ ಕಾವೇರಿ ಚಂಗ್ರಾಂದಿ ಪುತ್ತರಿ ಕೈಪ ಮಣ್ಣ್
ಕಾವೇರಿ ತೀರ್ಥರೂಪಿಣಿಯಾಯಿ ಪರೆವ ಪವಿತ್ರ ಪುಣ್ಯತ್ ಮಣ್ಣ್
ಇದೇ ಭೂರಮೆ ದೇವಿ ಸನ್ನಿಧಿರ ಪಾವನ ಕೊಡವ ಮಣ್ಣ್
ಏಳಿ ಎದ್ದೇಳಿ ನಂಗಡ ನೈಪುರ ಮಣ್ಣ್‌ನ ರಕ್ಷಣೆ ಮಾಡಿ, ಮಾರತಿ
ನಷ್ಟ ಕಷ್ಟಬಕ್ಕು ಮಣ್ಣ್ ಮಾರ್‌ನಕ ನಂಗಕ್ ನೆಲೆ ಇಲ್ಲತಾಕು
ಮಣ್ಣ್ ಉಂಡೇಂಗಿ ಮನಸ್ಥಾನ, ಇಲ್ಲೇಂಗಿ ಕೇಕೊಳ ಸ್ಥಾನ
ನಂಗಡ ಮಣ್ಣ್‌ಲ್ ನೈಚಿತ್ ಬೊಳತ್‌ನ ಸಣ್ಣಕ್ಕಿರ ನೈಕೂಳುಂಗನ.

**ಚೇಂದ್ರಿಮಾಡ ಗ. ಮುತ್ತಪ**
**ಕುಶಾಲನಗರ**

# ಸ್ವಗತ



ಹನಿ ಹನಿ ಮಳೆಯಲಿ
ನೆನೆಯುವಾಗಲೆಲ್ಲಾ
ನೆನೆಯುತ್ತೆ ಮನ ನಿನ್ನನು!
ಕಾಗದ ದೋಣಿ
ಕೆನ್ನೀರಿನಲ್ಲಿ ತೇಲಿ ಹೋದಂತೆ
ಕನಸುಗಳೆಲ್ಲ ಜಾರಿ ಹೋದಾಗಲೇ
ಹೊಳೆದದ್ದು ಇದರ ವಾಸ್ತವವೇ ಬೇರೆ,
ಜಾತಿ, ಮತಗಳೊಂದಿಗೆ
ಜೋಪಡಿ, ಮಹಡಿಗಳ ನಡುವಿನ ಅಂತರ!
ಯಾವುದೋ ದಾರಿ, ಯಾರದೋ ನೀತಿ
ಕಾಂಚಾಣ ಮಾಡಿಟ್ಟೋನೆ ಜಾಣ
ಮನಸ್ಸು, ಸಂಬಂಧಗಳನ್ನೆಲ್ಲಾ
ಕವಡೆ ಕಾಸಾಗಿಸಿದರೆ
ಯಶಸ್ವಿ ಬದುಕು,
ಹುಟ್ಟಿದ್ದು ಸಾರ್ಥಕ್ಯ!
ಮಗ ಹೇಳೊದಿಷ್ಟೇ ಅಪ್ಪನಿಗೆ 'ಹುಚ್ಚು'
ಅರವತ್ತರ ಅರಳು ಮರಳು ಸೊಸೆ ಉವಾಚ
ನಾನು ಬರುವೆ ತಾತಾ ನಿನ್ನೊಂದಿಗೆ
ಮೊಮ್ಮಗಳಿಗೆ ಮಾತ್ರ ಮಳೆಯೇ ಜೀವ
ನಿನ್ನಂತೆ ಕನಸು ಕದಿಯುತ್ತಾಳೆ
ಹನಿ ಹನಿಯಲಿ ನೆನೆಯುತ್ತಾ .... ಕುಣಿಯುತ್ತಾ.....

ಮಂಜು ಗೋಪಿನಾಥನ್
ಹೊದ್ದೂರು ಗ್ರಾಮ

# ಭೂರಮೆ

ಮುಂಜಾನೆಯ ಮಂಜಿನ ಹನಿ
ಮಿಣ,ಮಿಣವೆಂದು ಮಿರುಗುತಾ
ಬಾಗಿ ಬಳುಕುತಾ ಹರಿದಿರಲು
ಜಲಧಾರೆಯ ರಭಸಕ್ಕೆ ಬೆಚ್ಚಿ
ಭೂರಮೆಯ ಬಾಚಿ ತಬ್ಬಲು
ಕಾದಿದೆ ಭೂವಿಗಿಳಿಯಲು ತವಕದಿ!

ತರುಲತೆಯ ಬಳಸಿನಿಂತ ಹೆಮ್ಮರವ ಕಂಡು
ನಸುನಕ್ಕು ನಲದಿದೆ ಮಲ್ಲೆ, ಜಾಜಿ, ಸಂಪಿಗೆಯ ತೋಪು
ತಂಪಾಗಿ ಬೀಸುತಿಹ ತಂಗಾಳಿಗೆ
ತನ್ನ ಇಂಪನೆಲ್ಲ ಬೆರಸಿ
ಕಂಪಿಸಿದೆ ಹೂದೋಟದೊಳಗಿನ
ಬಗೆಬಗೆಯ ಹೂಗಳ ಗುಂಪು!

ನಾ ಮುಂದೆ, ತಾ ಮುಂದೆನ್ನುತಾ
ದುಂಬಿಯ ಝೇಂಕಾರ
ಮೇಳವಿಸಿದೆ ಮೈಮರೆತು!
ಕಾನನದ ಗೂಡೂಳಗೆ ಹಾಡಿದೆ
ಮೈನಾ, ಕೋಗಿಲೆಗಳ ಹಿಂಡು
ನನಗಾರು ಸಾಟಿ ಇಹರೆಂದು?

ಕಾರ್ಮೋಡದ ಅಂಚಿನಲಿ
ಮಿಂಚಿದ ಮಿಂಚಿಗೆ
ನಸುನಾಚಿ ಗರಿಬಿಚ್ಚಿ
ನೃರ್ತಿಸಿದೆ ನೈದಿಲೆಯೊಂದು!
ಇದುವೆ ಸ್ವರ್ಗವೆಂದು

ಸಾರಿ ಸಾರಿ ನುಡಿಯುತಿಹಳು ಭೂರಮೆ
ಅಂದು, ಇಂದು, ಇನ್ನು ಮುಂದು!

ಶ್ರೀಮತಿ ರಾಣಿ ಎಸ್.ಕೆ., ಸೋಮವಾರಪೇಟೆ

# FLOWER



Flower....
You are so beautiful
The brightness is wonderful
Your lovely colours
Make me feel jealous

Every day I look at you
God has given such a gift to you !
you spread your fragrance around
When I look at you
you feel proud

I'm fascinated by you
I wish I could be you
When I feel sad
I look at you
I pray God for
Your happiness

**Monish V .J.**
IX Standard
Madikeri

# ಸಂಸಾರ

ದೇವಕಾಡ್‌ರ ಬನತ್‌ಲ್| ಪುಳಿ ಮಾಂಗೆ ಮರತ್‌ರ ಕೊಡಿಲ್
ಇಂಜತ್ ದಂಡ್ ಪಕ್ಷಿಯ| ಗಟ್ಟಿ ಮುಟ್ಟ್ ಪ್ರೀತಿ ವಿಶ್ವಾಸತ್
ಕಯಿಪ ಇಂತ್ ನಾಳ್‌ನ ಕುಶಿಲ್|| ಇಟ್ಟತ್ ಮುಟ್ಟೆನ
ಕಾಪಳತ್ ಪೊರ ಬಾತ್ ದಂಡ್ ಚುಪ್ಪಿ ಕುಂಞಿಯ||

ಚುಪ್ಪಿಯಡ ಚಾಯಿಕಂಡ್
ತಬ್ಬಿ ಕೊದ್‌ಚತ್ ತಾಂಡ ರೆಕ್ಕೆರೊಳ್‌ಲ್|
ನೇರ ನೇರಕ್ ತೀನಿ ಕೊಡ್‌ತಿತ್ ಚಾಕ್‌ಚಿ ಕುಂಞಿಯಳ||

ರೆಕ್ಕೆ ಪುಕ್ಕ ಬಂದ ಕುಂಞಿಯ
ಚುಪ್ಪಿ ಚುಪ್ಪಿ ಮೊಟ್ಟ್ ಎಡ್‌ತ
ತುಳ್ಳಿ ತುಳ್ಳಿ ಕಳಿಪಾನ ನೋಟಿತ್
ಕುಶಿಲ್ ತುಳ್ಳಿಕಳಿಚತ್ ಅಪ್ಪನವ್ವನು||

ಬೋಟೆಕಾರನೊಬ್ಬ ಬಂತ್
ಬಲೆನ ಬೀಚ್‌ಚಿ ಒಮ್ಮ||
ಚುಪ್ಪಿ ಕುಂಞಿಯ ಒದ್ದಾಡ್‌ಚಲ್ಲಿ
ಪೊರಬರಲಾರತೆ ಒಳ್‌ಲ್||

ತೀನಿಕ್ ಪೋನ ಅಪ್ಪ ಅವ್ವಂಗ
ಬಾಯಿ ದುಂಬ ಕೊಂಡ ಬಾತ್ ತೀನಿನಾ
ಕುಶಿಲ್ ಗೂಡ್‌ಕ್ ಪಾರಣೆ
ಕೊದಿ ಕುಂಞಿಯ ಬಲೆಲ್, ಮೊರಟತ್ ದುಃಖತ್||

ಮಕ್ಕಳಿಲ್ಲತ ಜೀವ ಬೋಂಡಾಂದ್
ತಾನು ಬುದ್ದತ್ ಬಲೆರೊಳ್‌ಲ್||

ಪುಗ್ಗೇರ ಸಮಿ ಸನ್ನು
ಪೊನ್ನಂಪೇಟೆ

# ಚುಟುಕಗಳು



## ನನ್ನ ತಂಗಿ

ನನ್ನ ತಂಗಿ ನಿಮ್ಮಿ
ಅವಳು ಭಾರೀ ಡುಮ್ಮಿ
ಚಾಕ್ಲೇಟ್ ಎಷ್ಟು ಕೊಟ್ಟರೂ
ಅವಳಿಗದು ಕಮ್ಮಿ!

## ಗಲಿಬಿಲಿ

ಗೋಡೆ ಮೇಲೆ ಹಲ್ಲಿ
ಬಿಲದೊಳಗೆ ಇಲಿ
ಯಾವುದನ್ನು ಹಿಡಿಯಲೆಂದು
ಬೆಕ್ಕಿಗಾಯ್ತು ಗಲಿಬಿಲಿ

## ನೆರೆಮನೆ ಮಲ್ಲ

ನೆರೆಮನೆ ಮಲ್ಲ
ತಿನ್ನಲು ಬೆಲ್ಲ
ಬಂದನು ಮೆಲ್ಲ

ಆದರ್ಶ ಕಾಂತಬೈಲು
ಆರನೇಯ ತರಗತಿ
ಮಡಿಕೇರಿ

# ಕವಿಯ ಹಾಡು



ಕವಿಯಾಗಬೇಕೆಂದರೆ
ಕೊರೆಯಬೇಕಿಲ್ಲ ನೀನು
ನೂರಾರು ಕವನ
ಉಪಮಾನ ಪ್ರವೀಣ
ಆಗಬೇಕಿಲ್ಲ ಕಾಳಿದಾಸನಂತೆ
ಪುಟಗಟ್ಟಲೆ ಬರೆಯಬೇಕಿಲ್ಲ
ವಾಲ್ಮೀಕಿಯಂತೆ
ಎಲ್ಲಾ ಬಲ್ಲವನಾಗಬೇಕಿಲ್ಲ
ನೀನು ಸರ್ವಜ್ಞನಂತೆ
ಅನರ್ಥಕಾರಿ ವಿಪರೀತಾರ್ಥ
ಕಾರಿ ವಿವರಣೆಯೂ ಬೇಡ
ಬರಿ ನೀನು ಒಂದಷ್ಟು
ಮನದೊಳಗಿನ ತಾಪವೆಲ್ಲ
ಕರಗಿ ನೀರಾಗುವಂತೆ
ಮುಖದ ಮೇಲಿನ ನಿರಿಗೆ
ಸರಿ ಹೋಗುವಂತೆ
ಭಾವಸಮೃದ್ಧ ಸಂತುಲಿತ
ಪದ ತುಂಬಿದ ಸಾಲುಗಳ
ಹಿಡಿದಿಟ್ಟ ನಿಟ್ಟುಸಿರು
ಹೊರಹೋಗುವಂತೆ
ಹೃದಯ ಹಗುರಾಗುವಂತೆ

ಪಿ.ಡಿ. ಹರಿಣಿ, ಪಾಲೂರು ಗ್ರಾಮ

# ಸುನಾಮಿ



ತಾನಾಗಿ ತೆರೆಗಳು ಒಮ್ಮೆ ತೀರಕ್ಕೆ ಬಂತು
ಸುನಾಮಿ ತಾಳಕ್ಕೆ ಕುಣಿಯಿತು ಭೂಮಿ
ನಡುಕಗೊಂಡ ಭರತವಾಯಿತು ಅಂದು
ಕಣ್ಣ ಎದುರಲ್ಲೇ ಹೋಯಿತು ಅಂದು
ಪತನಗೊಂಡು ಮಾನವ ನಿರ್ಮಿತ
ಅಂಬರ -ಚುಂಬಕ  ಮಹಡಿಗಳೆಲ್ಲವು ಅಲುಗಾಡಿ
ಮರುಕ್ಷಣದಲ್ಲೇ ಕಿವಿಗಡಚಿಕ್ಕುವ ಸದ್ದುಗಳೊಂದಿಗೆ ಧರಶಾಹಿ?
ನಯನ ಮನೋಹರ ನಗರಗಳೆಷ್ಟು ಸಾಗರ ಸೇರಿತು ಬಲಿಯಾಗಿ ಮುಳುಗಿ
ಹೋಗಿ ಸರ್ವನಾಶವಾಗಿ ಎಲ್ಲ ತನ್ನಿಂತಾನಾಗಿ

ಹೆತ್ತವರಿಲ್ಲದ ಕಂದನ ರೋಧನ
ಕೇಳಲು ಚುಂಬಿಸಿ ಮಿಡಿಯುವುದು
ಬಂಧುಗಳು ಅಳಿದ ಜನಾಕ್ರಂದನ
ಮಾನವ ಮನವನ್ನು ಸೀಳುವುದು
ಹೂಗಳ ರಾಣಿ ಕಣ್ಣಲ್ಲಾಡಿಸಿದರೆ
ಕಬ್ಬಿಣ ಹೃದಯವು ಕರಗುವುದು
ಮರುಕಗೊಂಡು ಚಿತ್ತ ಕೊರಗಿತಂದು
ಅಂತಹ ದುರಂತ ಕಂಡು

ಬಂದು ಸುನಾಮಿಯ ನೃತ್ಯವ ನೋಡಿದ
ಜನತೆಗೆ ಅದರಲಿ ಪಾಠವಿದೆ
ಚಂದದಿ ಕಾಣುವ ಭೂಮಿಗೆ ಒಡೆಯನ
ಸೂಚನೆ ಬಂದರೆ ಅಂತ್ಯವಿದೆ.
ಶಾಶ್ವತವಲ್ಲದ ನಶ್ವರ ಜಗವಿದು
ಅವನತಿಯತ್ತ ಸಾಗಲಿದೆ
ಕಾಣುವುದಿಲ್ಲ ದೃಷ್ಟಿಚಾಲವಿಲ್ಲ
ಒಂದು ಉಳಿಯುವುದಿಲ್ಲಾ....

ಪುದಿಯನೆರವನ ರಶ್ಮಿ ದೇವಪ್ಪ, ಪಾಲೂರು ಗ್ರಾಮ

# ಪುಡಿಕೂಳ್‌ಕ್ಕೊತ್ತ ಗೇಣ್ ಬಟ್ಟೆಕ್ಕೆಂಗ ನೆಡಿಕೂಡಿತ್ತಾ ದೋಂಡೂ



ಪುಡಿಕೂಳ್‌ಕೊತ್ತ ಗೇಣ್‌ಬಟ್ಟೆಕೆಂಗಾ
ನೆಡಿಕೂಡಿತ್ತೆಕ್ಕೊಲೂ ನ್ಯೆಚಿ ಕೂಟಂಡಿಯೆದುಂಡಲ್ಲಾ||
ಪಡಿತೊರಂದಿತ್ ಚಣ್ಣೂರನ ತೊತ್ತಿತ್ ಪಡಿಯಕ್ಕಿಕ್‌ಂದ್
ಬೋಡಿತ್ತಣ್ಣಂಡಿಯೆದುಂಡಲ್ಲಾ|

ಕುಡಿ ಪೊಲ್ತಿತ್ ಬಾಳ್ ಬದ್‌ಕ್ಲೆಲ್‌ಂಗಿತ್ ಸಾಲ್
ಸಂತಾನ ಪೆರ್ತಿತ್ ಕಾಲ್ ನ್‌ೕಟಿತ್ತಳಕಂಡಿಯೆದುಂಡಲ್ಲಾ|
ಪೋಡಿ ಭಯ ತೇಕಿತ್ತೊಗ್ಗಟ್ಟೊರ್ಮೆಲ್
ಎಲಂಗಿತ್ ಕೂಡ್ ಕುಟುಂಬಾಂದೊಕ್ಕಂಜಕ್ಕಾಂದ್ ಕೂಡಿಯಾಡೊಕುಂಡಲ್ಲಾ|
ಪುಡಿಕೂಳ್‌ಕ್ಕೊತ್ತ ಗೇಣ್ ಬಟ್ಟೆಕ್ಕೆಂಗ
ನೆಡಿಕೂಡಿತ್ತೆಕ್ಕೊಲೂ ನ್ಯೆಚಿಕೂಟಂಡಿಯೆದುಂಡಲ್ಲಾ||

ದುಡಿಕೊಟ್ಟ್ ಪಾಟಾಯಿತ್ತೆಲ್‌ಂಗಿತ್ತಂಗಡಾಗುರು ಕಾರಣಂಗೊತ್ತದೇವ ದೆಯ್ಯಳಾ
ತುದ್‌ಚಿತೊಂದಾಯಿ ಬಾಳ್‌ಬದ್‌ಕ್ ನೀಸೊಕುಂಡಲ್ಲಾ|
ಎಡೆಬೆಚ್ಚಿತ್ತಂಗಡಾ ಗುರು ಕಾರಣಂಗದ್‌ಂಗೊತ್ತ
ಪೊರಂಗೂಟ್‌ದೇವಕ್ಕಡ್ಡ ಬುದ್ದ್ ತೊಪ್ಪದುಂಡಲ್ಲಾ|
ಕೇಡ್ ಕೆಟ್ಟಾನ ತೇಕಿತ್ತಂಗೋರ್ ಕುಡಿಯಾಯಿತ್ತೊಗ್ಗಟ್ಟೊತ್ತೊರ್ಮೆಲ್
ಎಲಂಗಿತ್ ಪೊಲಂಡಿಯೆದುಂಡಲ್ಲಾ|
ಪಡೆಭೀರಂಗಳಾನ ಕೊಡವ ಕೋವುಲೆಲಂಗಿ
ತ್ತಂಗಪರೋಪಕಾರಿಯಳಾಯಿತ್ ಬಾಳಂಡಿಯೆದುಂಡಲ್ಲಾ|
ಪುಡಿ ಕೂಳ್‌ಕೊತ್ತ ಗೇಣ್‌ಬಟ್ಟೆಕ್ಕೆಂಗಾ ನೆಡಿಕೂಡಿತ್ತೆಕ್ಕೊಲೂ ಕೂಟಂಡಿಯದುಂಡಲ್ಲಾ||

ದುಡ್ಕಿತ್ತೆಂದೂ ಮೊಟ್ಟ್‌ಡಂಡಾ ಬಂಡೆಕ್ಕೆಂದೂ ಮಂಡೆಕುಟ್ಟಂಡ
ಕಂಡವಂಡೆಂಜಿಕ್ಕಾಷೆ ಪಡತ್ತಂಗಾ ಬಾಳ್ ಬದ್‌ಕ್ ನೀಸಂಡಿಯೆದುಂಡಲ್ಲಾ|
ಪುಂಡ್‌ಪೋಕ್ರಿಯಡಾಟ ಕೂಟಕ್ ಕೂಡಂಡಾ
ಅಂದಂಗಳಾಯಿತ್ತಂದೂ ಪುಂಡ್ ಪುಕಾರಕ್ಕೆಡೆಯುಂಡಾಕಂಡಾ|

ಪಂಡತ್ತಾನೆಂದೂ ತೇಕಿತ್ತಾಡಿಕಳಿಕಂಡಾ ಎಂಗಡಂದಿಯಿತ ಸಂಸ್ಕೃತಿ
ಪದ್ದತಿಯುಡ್‌ಪ್ ನಡ್‌ಪ್‌ನೆಂದೂ ತೇಕತ್ತಿಕ್ಕನಾ|
ಪಾಡ್‌ಪಟ್ಟಿತ್ತಂದುಂಡ ಮಂಬಟ್ಟ ಕೂಳ್‌ನೆಂಗೆಂದೂ ಮರ್ಕತ್ತಿಕ್ಕನಾ
ಕಾವೇರಿಗುತ್ತಂಗಕ್ ಕದ್ ಕೊಂಬೊಪ್ಪ್‌ಚಿಟ್ಟಿತ್ತಾ ಟಾಡಂಗನಾ|
ಪುಡಿಕೂಳ್‌ಕೊತ್ತ ಗೇಣ್ ಬಟ್ಟೆಕ್ಕೆಂಗಾ ನೆಡಿಕೂಡಿತ್ತೆಕ್ಕೊಲೂ ನೈಚಿ ಕೂಟಂಡಿಯೆದುಂಡಲ್ಲಾ||

ಭಂಡಂಗಂದುಂಡೆಂಗಡಾ ಮಂಬಟ್ಟ ಕೂಳ್‌ಕ್‌ಟ್ಟ ವಿಷತ್‌ನ
ಎಂಗಡ ದೇವದೆಯ್ಯಕ್ಕಡ್‌ಂಗಿತ್ತಿಕ್ಕಡ್|
ದುಡಿಕೊಟ್ಟ್‌ಪಾಟ್‌ಲುಂಡ್ ಕೊಡಿಯೊಡಂದ್‌ಬಾಳ್‌ಕೊತ್ತ
ತಾಕತ್ತ್‌ತಡೆಯೊಯೊಡ್‌ಂದುದಿಪ ಚಣ್ಣೂರಂಡಾ ಬೊಳಿಯದಕ್ಕೂ|

ಕೊಡವಡಾಚಾರ ಪದ್ದತೀಕೊತ್ತ ಬೊಳ್ಕಾಟ್ ಕತ್ತಿಯಾಟ್
ಪೀಲಿಯಾಟ್ ಕೊಂಬಾಟುಮ್ಮತ್ತಾಟ್‌ರಾ ಬೋಜಾಂದದೊಂದ್ ಬೋರೇಂದುಂಡಲ್ಲಾ|
ಒಡಿಕತ್ತಿ, ಪೀಚೆಕತ್ತಿ, ಕುಪ್ಯಚಾಲೆ, ಮಂಡೆತುಣೀಯದ್‌ಂಗೊತ್ತತೋಕ್
ವೀರ ಕೊಡವಕ್ಕೊತ್ತ ಪಿತ್ರಾರ್ಜಿತ ಸೊತ್ತದಾಕಲೂ|
ಪುಡಿಕೂಳ್‌ಕೊತ್ತ ಗೇಣ್‌ಬಟ್ಟೆಕ್ಕೆಂಗಾ ನೆಡಿಕೂಡಿತ್ತೆಕ್ಕೊಲೂ ನೈಚಿಕೂಟಂಡಿಯೆದುಂಡಲ್ಲಾ||

ಕೊಡವಡಾಟ್‌ಪಾಟ್‌ಲೆಂದೂ ಬುಡಿಗೇಡ್‌ಂದಿಲ್ಲೇ ದೇವಳದ್‌ಂಗೊತ್ತ
ಗುರುಕಾರಣಂಗಳಾದುಡಿಕೊಟ್ಟ್ ಪಾಟ್‌ಲ್ ತುದ್‌ಚೀ ತೊಪ್ಪದಾಕುಲಾ
ಪುಡಿಗೊಂಡಾಚಾರ ಪದ್ದತಿ ಸಂಸ್ಕೃತಿಯುಡ್‌ಪ್
ನಡ್‌ಪೋಡೆ ಬಾಳ್‌ಬದ್‌ಕದೆಕ್ಕೊಲು ತೂಡ್‌ಬೊಳೀಂದದಾಕುಲಾ|
ಬುಡಿಗೇಡ್‌ಂದಿಲ್ಲತ್ತಳ್ಪ್‌ಲೆಡೆಮೇಂಗಿತೊಂದಾಯಿ
ನಾಟಾಯಿ ಕೂಡಿತ್ ತುದಿಪ ಪಡೆಬಾಯೀ ದುಡಿಕೊಟ್ಟ್‌ಪಾಟಾಕುಲಾ|

ಮಂಡೆಯೊಂದುಂಡೇಂಗೆಂಗಾ ಮಂಡೆತುಣಿ ಕೆಟ್ಟೊಬ್ಲೂಂದರ್ಜಿತ್ತಂಗೆಕ್ಕೋಲು.
ಮೊಟ್ಟ್ ಮಿಞಕ್‌ಟ್ಬಾಡೋಂಡೂ|
ಪುಡಿಕೂಳ್‌ಕೊತ್ತ ಗೇಣ್ ಬಟ್ಟೆಕ್ಕೆಂಗಾ ನೆಡಿಕೂಡಿತ್
ಎಕ್ಕೋಲು ನೈಚಿಕೂಟಂಡಿಯೆದುಂಡಲ್ಲಾ|| "ಸತ್ಯಂ, ಶಿವಂ ಸುಂದರಂ!"

ಬಡ್ಡೀರ ಮಣಿಚಂಗಪ್ಪ, ಕೊಳಗದಾಳ್

## ಸ್ನೇಹ



ಪ್ರತಿ ದಿನ ಸೂರ್ಯ ಉದಯಿಸುವುದ
ಮರೆಯುವುದಿಲ್ಲ
ಪ್ರತಿದಿನ ಚಂದ್ರ ಮುಳುಗುವುದ
ಮರೆಯುವುದಿಲ್ಲ
ಪೃಥ್ವಿ ಸುತ್ತುವುದ ಮರೆಯುವುದಿಲ್ಲ
ಹಾಗೆ ನಾನು ನಿನ್ನ ಸ್ನೇಹವನ್ನು
ಮರೆಯುವುದಿಲ್ಲ.

## ಸ್ನೇಹ

ಕಣ್ಣೆಂಬ ಕ್ಯಾಮರದಲ್ಲಿ
ಕ್ಲಿಕ್ಕಿಸಿದ ನಿನ್ನ ಬಿಂಬ
ಮನಸ್ಸಿನ ಆಳದಲ್ಲಿರುವ
ನಿನ್ನ ನೆನಪು
ನಿನ್ನ ಮರೆಯಲು ಬಿಡದ
ನೆನಪಿನ ಚಿಪ್ಪು
ಹೀಗೆ ಇರಲಿ
ನನ್ನ ನಿನ್ನ ಸ್ನೇಹ ಗೆಳೆಯ

## ಕಾರ್ಗತ್ತಲು

ಕಾರ್ಗತ್ತಲು ಕವಿದ ಗಗನವೇ
ಮಳೆಯ ಸುರಿಸು ಭುವಿಗೆ
ಹಸಿರ ಚಿಗುರಿಸು
ವನಸಿರಿಯ ಹೆಚ್ಚಿಸು
ವನದೇವಿಯ ಅಳಿವು ತಪ್ಪಲಿ
ಉಳಿವು ಹೆಚ್ಚಲಿ ಆ ಉಳಿವ ಕಂಡು
ಖುಷಿಯ ಕಾಣುವೆ ಗಗನವೇ!

**ಶೈಲಜ, ಮಡಿಕೇರಿ**

## ನಾನು



ನಾನು ಸರಿಯೆಂಬ ಕಲ್ಪನೆ ಬೇಡ
ಕಲಿಯುವುದು ಸಾಕಷ್ಟಿದೆ ನೋಡ
ನಾನು ನಾನು ಎಂಬವನು ಮೂಢ
ನಾನೇ ನಾನು ಎಂಬವನ ಸಹವಾಸ ಬೇಡ

## ಸಮಯ

ಜೀವನದಲಿ ತಿಳಿಯಿರಿ ಪ್ರತಿನಿಮಿಷದ ಮಹತ್ವ
ಪಾಲಿಸಲು ಮುಂದಾಗಿ ಒಂದು ನಿರ್ದಿಷ್ಟ ತತ್ವ
ನಿಮಿಷ ನಿಮಿಷಗಳು ಕಳೆದು ಹೋಗುವ ವಿಪತ್ತು
ಸಮಯ ಪಾಲನೆಗೆ ವಹಿಸಿ ಮುಂದಾಳತ್ವ

## ಜಾಗ

ಎಲ್ಲಾ ವಸ್ತುಗಳಿಗಿರಲಿ ಒಂದು ನಿರ್ದಿಷ್ಟ ಜಾಗ
ಆಗಲೇ ವಸ್ತು ಸಿಗುವುದು ಬೇಗ
ಜಾಗದ ಬದಲಾವಣೆ ಮಾಡುತ್ತಿರುವಾಗ
ಸಿಗುವುದಿಲ್ಲ ನೀಹುಡುಕುವ ಭಾಗ

## ನಗು

ನಗುವೇ ಜೀವನದ ಮಂತ್ರ
ಉತ್ತಮ ಆರೋಗ್ಯಕ್ಕಿದು ಯಂತ್ರ
ಸ್ನೇಹಿತ ಸಂಬಂಧಿಗಳ ಆಹ್ವಾನಕ್ಕಿದು ಸೂತ್ರ
ನಗುವಿಲ್ಲದ ಜೀವನ ಎಲ್ಲೂ ವಹಿಸಲ್ಲ ನಮ್ಮ ಪಾತ್ರ

ಅಬ್ದುಲ್ ರಶೀದ್, ಕೊಳಕೇರಿ

(ಕುಂಬಾರ ಭಾಷೆ)

# ಗೆಳತಿ



ಅಂದ್ ಪರಿಚಯ ಆದ
ನನ್ನ ಅಪರೂಪದ ಗೆಳತಿ
ಇಂದ್ ಎಲ್ಲದೆಕೆಲಾ
ಒಟ್ಟಿ ಇರ್‌ತೊ ಆ ಗೆಳತಿ

ಅಮ್ಮಾಂದ್ ಹೇಳ್‌ತ್ತೊದ್
ಎಸ್ ಮುಖ್ಯವೊ ಅಂಇ
ತಿಳುವಳಿಕೆಯ ಆಗಲಿ, ಬರೆಯಕೇ
ಆಗಲಿ ಗೆಳತಿಯೇ ಸರಿ

ಎಲ್ಲಿಯೇ ಇರಲಿ ಎಂಜ್ಞೆ ಇರಲಿ
ಕತ್ತಲೇ ಆಗಲಿ, ಹಗಲೇ ಆಗಲಿ
ಪ್ರೀತಿಯಿಂದ ಇರ್‌ತೊ ಅಣ್ಣತಂಗಿಯಗೆ
ಜೀವರಿಲ ಜೀವಕೊಡ್‌ತೊ ಗೆಳತಿಯೇ ಸರಿ

ಒಳ್ಳೊರೇ ಆಗಲಿ, ನೆಂಟರೇ ಆಗಲಿ
ನಮ್ಮ ಮನಸಿ ಬೇಜಾರಾದಡೆ
ಬಡವರೊ, ಶ್ರೀಮಂತರೊ ಹೇಳ್‌ಣಕೆ
ಒಂದೇ ಒಂದು ಗೆಳತಿ ಸಾಕ್

ಹೆಚ್.ವಿ. ಸುನೀತ ವಿಶ್ವನಾಥ್
ಬೆಟ್ಟಗೇರಿ.

# ದಾಖಲೆ



ಏ...ಚಿನ್ನಾ....
ಸಾರಾಯಿ ಕುಡ್ದು ...ಕುಡ್ದು
ಸೇರ್ತೀನಿ ಗಿನ್ನಿಸ್ ದಾಖಲೆ....
ಏ ಚಿನ್ನಾ.....
ಆ ಬಾಟ್ಲಿಂದ ನಿನ್ನ
ತಲೆ ಒಡಿತ್ತೀನಿ ಸೇರಿಸ್ಕಾ
ನಿನ್ನ ಜೊತೆ ನನ್ನಾ....!

# ಪರೀಕ್ಷೆ

ಬುಕ್ ಹಿಡಿದ್ರೆ ಸಾಕು
ಬರುತ್ತೇ ನಿದ್ದೆ...
ಪರೀಕ್ಷೆ ಭೂತ ಕನಸಲಿ ಬಂದು
ಬೆಚ್ಚಿ ಬಿದ್ದೇ
ಕಣ್ ಬಿಟ್ಟು ನೋಡಿದ್ರೇ...
ಮೈಯೆಲ್ಲ ಬೆವರಿನ ಮುದ್ದೇ....?

# ನನ್ನವಳು

ನನ್ನವಳು ತುಂಬಾ ಕಪ್ಪು
ಮಾಡ್ತಾಳೆ ಬಾರಿ ಮೇಕಪ್ಪು
ಎದ್ದ ತಕ್ಷಣ ಬೇಕು ಕಾಫೀ ಕಪ್ಪು
ಶಾಪಿಂಗ್ ಹೊರಟಳೂಂದ್ರೇ....
ನನ್ನ ಜೇಬಲ್ಲಿರೋ ದುಡ್ಡೆಲ್ಲ ಸೇರುತ್ತೇ....
ಅವಳ ಕರ್ಚಿಪ್ಪು....!

**ಜಲ ಕಾಳಪ್ಪ, ಹಾನಗಲ್**

# ನೆನಪು

ಅಮ್ಮ ನೀನು
ಊಟ ಏಟ್ಟೆ
ಪ್ರೀತಿಯಿಂದ
ಇಂದು ನಾನು
ಕಣ್ಣೀರಿಟ್ಟೆ
ನಿನ್ನ ನೆನಪಿನಿಂದ

# ಸೈಕಲ್ಲು

ಬಂದಿತು ಶಾಲೆಗೆ ಸೈಕಲ್ಲು
ಹತ್ತುವವರೆಗೆ ನಿಲ್ಲಲಿಲ್ಲ ಕೈ ಕಾಲು
ಮಕ್ಕಳು ಹೊರಟರು ಸವಾರಿ
ಸೈಕಲ್ಲಿನ ಅಂಗಗಳು ಹೋದವು ಜಾರಿ
ಹೊಡೆದೇ ಹೊಡೆದರು ಗಾಳಿ
ನಾಲ್ಕು ದಿನ ಬಾಳಲಿಲ್ಲ ಗಾಲಿ.

# ಕರ್ತವ್ಯ

ಹುಟ್ಟಿದ ಮೇಲೆ ಸಾಯಲೇ ಬೇಕು
ಬೆಳಕಿನ ನಂತರ ಕತ್ತಲೆ ಕವಿಯಲೇ ಬೇಕು
ಬದುಕಲು ಅಮ್ಲಜನಕ ಬೇಕೇ ಬೇಕು
ಪರಿಸರವನ್ನು ನಾವು ಉಳಿಸಲೇ ಬೇಕು.



# ಅಯಸ್ಕಾಂತ

ಕುಂಟುಬಿಲ್ಲೆ
ಆಡುತ್ತಿದ್ದೆ
ಹರೆಯದಲ್ಲಿ
ವಯಸ್ಸಾದಂತೆ
ಅದರ ನನೆಪು
ಅಯಸ್ಕಾಂತದಂತೆ.

# ಸಮಾನ

ಹಗಲು ಇರುಳು
ಹುಟ್ಟು ಸಾವು
ಸುಖ ದುಃಖ
ಅಳು ನಗು - ಸಮಾನ.

ಎಲಿಜಬೆತ್ ಲೋಬೊ
ಸೋಮವಾರಪೇಟೆ

# ನೆನಪುಗಳು ಬಾರದೇಕೆ ?



ನೆನಪುಗಳು ಬಾರದೇಕೆ?
ಅಂದು ಹಾಡಿದ - ಆಡಿದ,
ಹಾಲ್ ಜೇನಿನ ಹುಡುಗಾಟ,
ಆದರೆ ಆ ಸಮಯದ,
ನೆನಪು ಮತ್ತೆ ಬಾರದೇಕೆ.?

ಸೂರ್ಯನ ಪ್ರಕಾಶಮಾನ ಬೆಳಕಿಗೆ,
ನಕ್ಷತ್ರ ಪುಂಜಗಳು,
ಸಾಗಿ ಬರುತ್ತಿದೆ ಆ ಗಳಿಗೆಗೆ !
ಕೋಗಿಲೆಯ ಹಾಡು,
ಮಾರ್ಧನಿಸಿದೆ ಬಾನಂಗಳದೂರಿಗೆ,
ಇಂದೇಕೆ ಕಾಣಬರುತ್ತಿಲ್ಲ,
ಆ ರಸ ನಿಮಿಷ !
ಹೊಸ ಹರುಷ.

ಅಂದುಕೊಂಡೆ ಸಮಯದ,
ಬೆಲೆ ತಿಳಿದುಕೊಂಡೆ !
ಕಾಲ ಚಕ್ರಕೆ ಸರಿಸಾಟಿ ಇಲ್ಲವೆಂದು,
ಅದು ಚಲಿಸಿದಂತೆ ಸಾಗಬೇಕಿಂದು,
ಆದರೂ ಕಾಡುತ್ತಿದೆ,
ಏಕೆ ಬರುತ್ತಿಲ್ಲ ನೆನಪಿಂದು,
ತಿಳಿಯಿತು ನನಗೀಗ,
ಹರೆಯದ ವಯಸ್ಸಿದು ಎಂದು.

**ಸಂದೇಶ್ ಜೋಸೆಫ್ ಡಿ'ಸೋಜ. ಬಿ.ಎ.ಬಿ.ಇ.ಡಿ.ಎಂ.ಎ.,**
**ಮೈಸೂರು.**

# ಪ್ರಣಯ ಮಳೆ

ಬಾಗಿಲ ತೆಗೆ ಕಾಲವೆ.......
ಕಾರ್ಗತ್ತಲ ಸಂಧ್ಯೆಯಲಿ ಇಂದ್ರ ನೀಲ ಬಾನಿಂದ
ಪ್ರಣಯ ರಾಜನೆನ್ನರಸಿ ಬರುವನು
ಸ್ವಪ್ನ ರಥವೇರಿ ಕಾಯುತ್ತಿರುವೆ....

ಆಗಮನದ ಸಂದೇಶವಿದ್ದರೂ ಗಾಳಿಯಲಿ
ಆಗಸದಲ್ಲೆಲ್ಲೂ ಭೀತಿಯ ಛಾಯೆ
ಕಾರ್ಮುಗಿಲ ಅದ್ಭುತ ಕಸರತ್ತುಗಳೆಲ್ಲವೂ
ವರುಣ ರಾಜನ ಕೋಪ ಸಂಕೇತಗಳು

ಸಿಡಿಲಿನ ಭರದಲಿ ಬೆಚ್ಚಿ ಬೀಳಿಸುತ
ಗುಡುಗಿನ ಧ್ವನಿಯಲಿ ಬೆದರಿಸುತಾ
ಕಣ್ಣಾ ಮುಚ್ಚಾಲೆಯೇಕೆ ಮೋಡದೊಳಹೊಕ್ಕು
ಕೋಪವಿದೇಕೆಂದು ಕೇಳುತ್ತಿರುವೆ ಕೇಳಿಸದೆ....

ವರ್ಷಧಾರೆಯಾಗಿ ಅಲಿಂಗಿಸಿತೆನ್ನರಸ
ಹನಿ ಹನಿಯಲು ಪ್ರಣಯ ಪಿಸುಗುಟ್ಟುಗಳು
ಕಚಗುಳಿಯಿಡುತಾ ಮೈಮನ ತೊಯ್ದು
ಉಲ್ಲಾಸದ ಉಯ್ಯಾಲೆಯಲಿ ಆಕಾಶ ತಲುಪಿದಂತೆ

ಮಳೆರಾಜನೆನ್ನ ಪ್ರಣಯ ಸಖನಾದರೂ
ಗುಡುಗು ಸಿಡಿಲಿನ ಭೀಕರತೆಯ ಹಾಗೆ
ಪ್ರಣಯ ಮಳೆಯಲು ಕಪಟತನದ ಭೀತಿಯಿದೆ
ಸಾಕ್ಷಿಯದಕೆ ಕಣ್ಮುಚ್ಚಿದ ನಕ್ಷತ್ರಗಳು!

**ಸುನಿತಾ ಲೋಕೇಶ್,**
**ಕುಶಾಲನಗರ**

## ನಿರಾಶೆಯ ನಡುವೊಂದು ಆಶಾಕಿರಣ...



ಮರುಬಾಗಿಲ ಬಡಿದು ಬರುವುದೆ ಆ ದಿನಗಳು
ಮರುಬಾಗಿಲ ತೆರೆದು ತರುವುದೆ ಆ ನಗು ನನ್ನೊಳಗೆ
ಮರಗಟ್ಟಿ ಹೋದ ಮನ ಮರುಜೀವ ಪಡೆಯಲು
ಮಂಜಾಗಿ ಕರಗುವುದೆಂದೂ ||೧||

ಸುತ್ತಲೂ ಬರಿ ಅಜ್ಞಾನದ ಕತ್ತಲು
ಉಸಿರುಗಟ್ಟಿ ಹೋಗುತಿರಲು
ನೆಲಕಚ್ಚಿದ ಹಣತೆಯನು
ಮನ ಮರುಕ್ಷಣ ಹುಡುಕಿಹುದು ||೨||

ಮಗುವಿನಂತೆ ಮನಕೇಕೆ
ಮಾತಿನುಳಿಯ ಪೆಟ್ಟು
ರಕುತ ಚಿಮ್ಮಿ ಹತ್ತಿಹುದು
ಕಟುಕ ಜಗ ಕುರುಡೇನು||೩||

ಮನಬಲ ಬೀಜ ಒಡೆದು| ಮರುಜೀವ ಪಡೆದು
ವಿಶ್ವಾಸ ಬೇರೂರಿ| ಹೆಮ್ಮರವಾಗಿ ಹರಡುವುದೆಂದೋ||೪||

ಸೋಲೆಂಬ ರಕ್ಕಸ ಕೈಬೀಸಿ ಕರೆದಿರಲು
ಅಸಹಾಯಕತೆ ಉಸಿರುಗಟ್ಟಿಸಿರಲು
ಬರಿ ಮುಳ್ಳು, ಬರಿನೋವು ಸಾಧನೆಯ ಹಾದಿಯಲಿ
ಮನಬೆಂದು ಬಸವಳಿದು ಪನ್ನೀರಿಗರಸಿಹುದು||೫||

ಸರಿಸಮಯ ಕೈಜಾರಿ ಇಹಲೋಕ ತ್ಯಜಿಸಿರಲು
ಕಣ್ಣಿಗಂಟಿರುವ ಪೊರೆ ಕಳಚಿ ಬೀಳದಿರಲು
ತರ್ಕವಿಲ್ಲದ ಪ್ರಶ್ನೆ ಮನ ತುಂಬಿರಲು
ಬರಿ ಆಶೆ, ಬರಡು ಭರವಸೆ, ಆದಕೆ ನಿರಾಶೆಯ ಒತ್ತಾಸೆ||೬||

**ಡಯನ ಕುಶಾಲಪ್ಪ, ಮೈಸೂರು**

## ಪ್ರಾಣ ಸಖಿ



ನನ್ನವಳು ರೂಪದಲ್ಲಿ ಯುಕ್ತ ಮುಖಿ
ನಗುವಲ್ಲಿ ಸದಾ ಅಸನ್ಮುಖಿ
ಕೋಪ ಬಂದಾಗ ಆಗುವಳು ಸೂರ್ಪನಕಿ
ಆದರೂ ಅವಳೇ ನನ್ನ ಪ್ರಾಣ ಸಖಿ

## ಬೇವು ಬೆಲ್ಲ

ಬೇವು - ಬೆಲ್ಲ ಮಿಶ್ರಣ
ಈ ಜೀವನ
ಬೇವು ಬೆಲ್ಲಗಳ
ಅನುಭವದಿಂಲೇ
ಹುಟ್ಟುವುದು ಕವನ

## ಅಂತರ

ಸಿಡುಕುವವನ ಮುಖ
ಪಾಳುಬಿದ್ದ ಮನೆಯಂತೆ
ನಗುವವನ ಮುಖ
ಮೈಸೂರು ಅರಮನೆಯಂತೆ

## ಹುದ್ದೆ

ಸಿಕ್ಕಿತು ನನಂಗೊಂದು ಸರ್ಕಾರಿ ಹುದ್ದೆ
ಖುರ್ಚಿ ಬಿಸಿ ಮಾಡಿದೆನು ಬರ್ಜರಿ ನಿದ್ದೆ
ಒಂದು ದಿನ ನಾನು ಸಿಕ್ಕಿ ಬಿದ್ದೆ
ಇದರಿಂದ ನನಗೆ ಹೋಯಿತು ನನ್ನ ಹುದ್ದೆ

## ಅಹಂಕಾರ

ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯನಿಗಿಲ್ಲ ಅಹಂಕಾರ
ಗಾಳಿ ನೆರಳು ನೀಡುವ ಮರಕ್ಕಿಲ ಅಹಂಕಾರ
ಆಸ್ತಿ ಸಂಪತ್ತು ನೀಡುವ ಭೂಮಿಗೆ ಇಲ್ಲ ಅಹಂಕಾರ
ಇದಲ್ಲವನ್ನು ಅವಲಂಭಿಸಿ ಜೀವಿಸುವ ಮನುಷ್ಯ ನಿನಗೇಕೆ ಅಹಂಕಾರ

ಎ.ವಿ. ಮಂಜುನಾಥ್, ವಿರಾಜಪೇಟೆ

# ತಾಯಿರ ದುಃಖ

ಅಂದಿತಿರಿ ಕತ್ತ್‌ಚಿಟ್ಟ್ ಭಕ್ತಿಲ್ ತುದ್‌ಚನಾ...
ಕೊಡಗ್‌ನ ಪೊಲತ್‌ಂದ್ ಕಾವೇರಮ್ಮ ಇಗ್ಗುತಪ್ಪನಾ ।
ನಂಗಕ್ ತಾ ಪಂಡೇತ ನಂದಾನ ಕೊಡಗ್‌ನಾ
ಪುಣ್ಯ ಭೂಮಿನಾ.... ಅಜ್ಜ ತಾಯಿರ ನಲ್ಲರಿಕೆನಾ॥

ಮುಚ್ಚ್‌ನ ಕಣ್ಮ್ಂಞಾಲುದ್‌ಚತೋರ್ ಪೊಂಬೊಳಿ
ದಿವ್ಯ ಶಕ್ತಿರ ಭವ್ಯ ರೂಪತ ಶಾಂತ ಮೂರ್ತಿ।
ಪೊಣ್ಣ್‌ರೂಪವೊಂದ್ ಎಲಂಗಿ ನಿಂದಿತಿಂಜತ್ ಕೇಳಿ
ಪಚ್ಚೆ ರಂಗ್‌ರ ಕಂಬಿ ಪೊಡಿಯತ್ ತೇಜೋ ಮೂರ್ತಿ॥

ನಿಸ್ಸಹಾಯಕತೆರ ಕಣ್ಣೀರ್, ಕಳೆಕಳ್‌ಂದಂಡ ಮೂಡ್
ಸುತ್ತಲೂ ಬೋಳ್-ಬರಡಾನ ಬನಂಗಾಡ್.....
ಶಾಂತಿ ನೆಮ್ಮದಿನ ಕಳ್‌ಂದಂಡುಳ್ಳ ಪೊನ್ನಾಡ್।
ಬಿಕ್ಕಿ ಮೊರ್‌ಟತ್ ನೊಂಬಲತ್... ಬೋಂಡ ಈ ಪಾಡ್...॥

ಸಹಿಸ್‌ಲೆ, ಕೇಟನಾ..... ಅಮ್ಮಾ.....ನೀ ದಾರ್?
ಜವಾಬ್‌ಚಿ, ನಾನೇ ಈ ನಾಡ್‌ರ ಕುಲದೇವಿ ಕಾವೇರಿ....।
ಸಹಿಸುಲೆ, ಕೇಳ್... ಪರಕೀಯಡ ದರ್ಬಾರ್.....
ಉಳಿಯೊಂಡು ಪೊನ್ನಾಡ್ ಕೊಡಗ್‌ರಾ ಸಿರಿ....॥


ಮೂಲ ನಿವಾಸಿಯಳ ಕೊದ್‌ಚಿ ಕೊಂಡಾಡಿ ಪೊಲತ್‌ನ
ಕೊಡಗ್ ಮಣ್ಣ್‌ಲ್ ನೆಲೆನಿಂದ್ ಪೋತ್‌ನ....|
ಇಂದಿಕ್ಕ ನಮ್ಮೆನಾಳ್‌ಲ್ ಒಂದಾಯಿ ಕಂಡಂಡಿಲ್ಲೆ
ಪಿಂಗಿತ್ ಕಾಂಬಕ ಮೌನತ್ ಮೊರ್‌ಟನಾ....||

ಪಣತ್‌ರಾಶೆಕ್ ಪಚ್ಚೆ ಬನಂಗಾಡ್ ಮುಡ್‌ಂಜತ್
ನ್ಯಾಯವು-ಧಮವು ಮೂಲೆಲ್ ತುರ್‌ಂಡಿತ್|
ಪುಂಡ ಪೋಲಿಯ ಭಂಡಾರ ಪೊಟ್ಟಿನೊಡ್‌ತತ್
ನಂದಾನ ನಡ್‌ಪುನ ಚೊಕ್ಕಿತ್ ಮರ್‌ಂದತ್||

ಆ ಕಣ್ಣ್‌ರ ತಿತ್ತ್‌ನ ಕಂಡಿತ್ ಬೊತ್ತಿತ್ ತೊತ್ತನಾ
ಅಮ್ಮಾ ಅರ್‌ಂಜಿತೋ ಅರಿಯತೆಲೋ ಮಾಡ್‌ನ ತಪ್ಪ್‌ನಾ|
ಕೆಲಕ್‌ಟ್ಟ್ ನಂದಾಕ್, ಬಾಂಗಿ ತುದಿಪಿನೋ ನಿನ್ನಾ....|
ಕಣ್ಬುಟ್ಟ್ ನೋಟಣೆ ಅರಿವಾಚಿ....' ಸ್ವಪ್ನತ್ ಕಂಡ ನಾ ತಾಯಿನಾ....'

**ಶ್ರೀಮತಿ ಕಾಡ್ಯಮಾಡ ರೀಟಾ ಬೋಪಯ್ಯ**
**ಸುಳುಗೋಡು**

# ಗವಾಯಿಗಳು



ಜೋಳಿಗೆಯ ತುತ್ತನ್ನು ನೀಡಿ
ಮಮತೆಯ ಜೋಗುಳವ ಹಾಡಿ||
ಅಕ್ಕರೆಯಿಂದ ಜೋಪಾನ ಮಾಡಿ
ನಲಿದರು ಮಕ್ಕಳೊಡಗೂಡಿ||

ಅಂಧರ ಬಾಳಿನ ಬೆಳಕಾಗಿ
ಪ್ರೀತಿಯ ತೊಟ್ಟಿಲ ತೂಗಿ
ನೋವು ನಲಿವಿನ ಹಾದಿ ಸಾಗಿ
ನಮಿಸಿರಿ ಅವರಿಗೆ ತಲೆ ಬಾಗಿ||

ಕತ್ತಲೆಯ ಅಂಧಕಾರದಲ್ಲಿ ಮಿಂಚಿದರು
ಬೆಳಗುವ ಜ್ಯೋತಿಯಾಗಿ ಪ್ರಜ್ವಲಿಸಿದರು
ಒಮ್ಮೆಲೇ ಕತ್ತಲಿನೊಳಗೆ ಕರಗಿ ಹೋದರು
ಪುಟ್ಟರಾಜ ಗವಾಯಿಗಳು ಅಮರರಾದರು

**ಕಾಡ್ಯಮಾಡ ಬಂಟಿ ಬೋಪಯ್ಯ**
**ಸುಳುಗೋಡು**

# ಹೊರಟು ಹೋಗು ಈ ಭೂಮಿಯನ್ನಗಲಿ...

ದೇಹವೇ ಹೊರಟು ಹೋಗು
ನೀ ಈ ಭೂಮಿಯನ್ನಗಲಿ
ಮಣ್ಣಲ್ಲಿ ಮಣ್ಣಾಗಿ
ಸಣ್ಣಗೆ ಮರೆದಾಡಿ ಹೋಗು ನೀ ನನ್ನಗಲಿ

ಅಮಾಯಕ ಜನಗಳ ಮಧ್ಯೆಯಲಿ
ಕಡು ಗಪ್ಪು ಸಮಾಜದೊಳಗೆ
ಹೇಗೆ ಬದುಕಲಿ ನಾ
ಅಯಸ್ಸು ಪೂರ್ತಿ ಒಂಟಿಯಾಗಿ

ಗಳಿಸಬೇಕಾದದ್ದು ಗಳಿಸಲಿಲ್ಲ
ಉಳಿಸಬೇಕಾದದ್ದು ಉಳಿಸಲಿಲ್ಲ
ಜೀವನದಲಿ ಏನನ್ನು ಸಾಧಿಸಲಿಲ್ಲ
ಇದ್ದರೇನು ಉಪಯೋಗ ಈ ಭೂಮಿಯಲಿ

ನನ್ನ ಜೊತೆ ಯಾರಿಲ್ಲ
ಇದ್ದಾರೆ, ಪಾಪ ಅನಾಚಾರಗಳು
ಬದುಕಲೇನಿದೆ ಆಸೆ ಹೊರಟು ಹೋಗು
ನೀ ಈ ಭೂಮಿಯನ್ನಗಲಿ.

ದಿವ್ಯಾ ಎಂ.ಎಂ.
ಮಡಿಕೇರಿ

# ಪಾದ ಯಾತ್ರೆ



ಇಲ್ಲಿ ಬೀದಿ ತುಂಬಾ
ನಮ್ಮವರ ರೋಧನ
ಅಲ್ಲಿ ಬಳ್ಳಾರಿಯಲ್ಲಿ
ನಮ್ಮ ನಾಯಕರ ಆರಾಧನ

ಇವರು ಗಣಿ ಗದ್ದಲಕ್ಕೆ ಮಾಡುವರು ಪಾದ ಯಾತ್ರೆ
ಇಲ್ಲಿ ನಮ್ಮವರಿಗೆ ಕೂಳು ಬೇಯಿಸಲು ಇಲ್ಲ ಪಾತ್ರೆ

ಇಲ್ಲಿ ನಮ್ಮವರು ರಾತ್ರಿ ಹಗಲುಗಳೆನ್ನದೆ ದುಡಿತ
ಅಲ್ಲಿ ಪಾದ ಯಾತ್ರೆ ನೆಪದಲ್ಲಿ ಕುಣಿತ ಕುಡಿತ

ಇಲ್ಲಿ ಮಳೆ ಬಾರದೆ ರೈತ ಕಂಗಾಲಾಗಿ ಕುಳಿತ
ನಮ್ಮ ನಾಯಕರಿಗೆ ಕೊಳೆತ ಗಣಿ ರಾದಕೀಯದೇ ಸೆಳೆತ

ಇವರಿಗೆ ಎಡ್ಡಿ ರೆಡ್ಡಿಯ ಅಧಿಕಾರ ಮುರಿಯುವ ತವಕ
ಅದಕ್ಕೆ ಗಣಿ ಹಗರಣದ ತನಿಖಾ,ಪಾದ ಯಾತ್ರೆ ಬಳ್ಳಾರಿ ತನಕ.

**ಕೆ.ಬಿ. ಜಗದೀಶ್**
**ಜೋಡುಬೀಟಿ.**

# ಕೊಡವತಿ



ಕೊಡವ ಸಂಸ್ಕೃತಿರ ಪೊಣ್ಣ್
ಇವ ಭಾರತ ದೇಶತ್‌ರ ಕಣ್ಣ್

ಒಡಿಯನ ಐಯಪ ಅವ ಪಟ್ಟಾಳಕ್,
ಬೇಲಿಯಾಪ ಇವ ಸಂಸಾರಕ್

ತಾಮನೆರ ಕೊದಿಮೋವ ಇವ
ಬಾಮನೆಕ್ ಪೊಂಬೊಳ್‌ಚ ಇವ

ನೈಚಿತ್ ಸಂಸಾರತ್‌ನ ಪೂಲ್‌ತಿತ್
ಆಯಿತ್ ಇವ ಇಂದ್ ಸಮಾಜಕ್ ಮಾದರಿ

ಬಾಳ್‌ರ ಗೋಳ್‌ನ ಸಹಿಸಿತ್ ಇವ
ಸೀತೆ ಸಾವಿತ್ರಿಯಡನ್ನಕೆ ತಾಬಾವ

ಎಳ್ತ್‌ಕಾರತಿ, ಇವ ಧೈರ್ಯಕಾರತಿ
ಮೊಟ್ಟ್‌ಪಟ್ಟ ಮನೆಕ್ ಇವ ಸಿರಿದೇವಿ

ಕಾವೇರಮ್ಮೆರ ಕೊದಿಮೋವ ಇವ ಪೊಂದೇವಿ
ಕಾತಂಡತ್ ತಾಮನೆ ಬಾಮನೆರ ಕೇಳಿ

ಪುದಿಯನೆರವನ ರೇವತಿ ರಮೇಶ್
ಮಡಿಕೇರಿ

# ನಮೋ... ಕಾವೇರಮ್ಮ



ಉಕ್ಕಿ, ಬಾ ತಾಯಿ... ನೀ ಉಕ್ಕಿ ಬಾ...
ತೀರ್ಥರೂಪತ್ ಬಂದಿತ್ ನೀಡ ಮಮ್ಮಾಯವತ್ತಾರ
ಕಾಟಮ್ಮ ತಾಯೇ... ಓ ಕೊಡವಡ ಕುಲದೇವಿ
ಆದೀ.. ಶ್ರೀ ಕಾವೇರಮ್ಮ

ದೇಶತ್‌ರ ಜನಳೆಲ್ಲಾ ಕಾತಳ್‌ತಿತ್ತಮ್ಮ...
ಆ ನೀಡ ದರ್ಶನಕಾಯಿತ್... ಕೊಂಬು ಕೊಟ್ಟ್ ವಾಲಗಾಯಿ...

ನೀ ಚಂದೋಳತ್ತ್ ಕುಂಡಿಕೆಲಿಂಜ ಉಕ್ಕಿ ಬಾ ಅಮ್ಮಾ ನೀ ಉಕ್ಕಿ ಬಾ...
ಕುಪ್ಯ ಚಲೇಲ್ ಎಲಂಗುವ ಕೊಡವ ಒಂಬಂಗಳ ನೀ.. ನೋಟ್ ಬಾ ತಾಯಿ...

ಕೊಡವತಿ ಪೊಡಿಯ ಉಡ್‌ತ್ ಮಂಡೆಕ್ ವಸ್ತ್ರಕಟ್ಟಿತ್
ತಳಿಯತಕ್ಕಿ.. ಬೊಳ್‌ಕಾಯಿ ಕಾತಳ್‌ತಿತ್ತಮ್ಮಾ ನೀಡ ದರ್ಶನಕಾಯಿತ್..

ಪಟ್ಟಮಾಡ ಮಂತ್ರ ಘೋಷ ಆಕಾಶತ್‌ರ ಎತ್ತರಕ್ ಕೇಪ ಕೂಡಿತಮ್ಮ
ನೀ ಚಂದೋಳತ್ತ್ ಪೆರ್‌ಂಜಾಯಿ ಕುಂಡಿಕೆಲಿಂಜ ಉಕ್ಕೀ ಬಾ ತಾಯಿ.. ಉಕ್ಕಿ ಬಾ..

ರೈತಾಪಿ ಭಕ್ತಂಗಳೆಲ್ಲಾ ಕಾತಳ್‌ತಿತ್ತಮ್ಮಾ
ನೀಡ ಸನ್ನಿದಿಲ್ ಕುಳ್‌ಚಿತ್ತ್ ಮುಕ್ತಿ ಪಡೆವಕಾಯಿತ್
ಭೂಮಿ ತಾಯಿಯೇ ಪಚ್ಚೆ ಪೊಡಿಯ ಉಡ್‌ತ್ತ್
ಕಾತಳ್‌ತಿತ್ತಮ್ಮಾ ನೀಡ ದರ್ಶನಕಾಯಿತ್ತ್

ನೀ...ಉಕ್ಕಿ ಬಾ ಅಮ್ಮಾ ಉಕ್ಕಿ ಬಾ...
ತೀರ್ಥ ರೂಪತ್ ಬಂದಿತ್ತ್ ನೀಡಾ ಮಮ್ಮಾಯತ್‌ನೊಮ್ಮ ಕಾಟಮ್ಮ ದೇವಿ ಈ ಜಗಕ್
ನಮೋ.. ಕೊಡವಡ ಕುಲದೇವಿ...ನಮೋ.. ಕೊಡಗ್‌ರ ವರತಾಯಿ..
ನಮೋ... ಆದಿ ಶ್ರೀ ಕಾವೇರಮ್ಮ ಚಾಕಿ ಪೊಲತ್ ಈ ಜಗತ್‌ನ ಸುಗತ್ತ್

**ಚಮ್ಮಟೀರ ಪ್ರವೀಣ್ ಉತ್ತಪ್ಪ,**
**ಸಂಪಾದಕ, ಕೊಡಗು ವಾರ್ತೆ, ಗೋಣಿಕೊಪ್ಪ**

# ಕವನದಲ್ಲಿ ಕವನ



ಕವಿ ಬರೆದುದು ಕವಿಯ ಕವನವಲ್ಲ
ಕವನ ವಾಚಕನದು ಅವನ ಕವನವಲ್ಲ
ಕವನ ಮುದ್ರಿಸಿದವನದಲ್ಲ ಕವನ
ಕವನ ಬರೆಯಲು ಇಂಬು ಕೊಟ್ಟವನದೇ ಕವನ
ಒಂದೊಬ್ಬನ ಜೀವನ ಸುಂದರ ಕವನ
ಕೆಲವರ ಜೀವನ ಭಯಾನಕ ಕವನ
ಇನ್ನೊಬ್ಬರ ಜೀವನವೇ ಬರೀ ವ್ಯಸನದ ಕವನ
ಕವನ ಬರೆಯುವವನ ಚಿಂತನೆಯೇ ಕವನ
ಕುಕ್ಕಟದ ಜೀವನದ ಸುತ್ತ ಸುಳಿದಾಡಿದೆ ಕವನ
ಕುಕ್ಕುಟವ ಕೊಂದವನದೊಂದು ಕವನ
ಕುಕ್ಕುಟವ ತಿಂದವನದೊಂದು ಕವನ
ಒಟ್ಟಾರೆ ಜೀವಿಯ ಜೀವಿತವೇ ಒಂದು ಕವನ
ಲಲನಂಗಿಯ ನಡೆಯೇ ಒಂದು ಕವನ
ನೋಡುವ ಪೋರನದು ಬೇರೆಯೇ ಕವನ
ಮಕ್ಕಳ ಪೋಷಿಸುವ ಬಗ್ಗೆ ಪೋಷಕರದೊಂದು ಕವನ
ಒಟ್ಟಾರೆ ಬ್ರಹ್ಮಾಂಡವೇ ಒಂದು ಕವನ ಸಂಕಲನ
ನಮ್ಮನ್ನಾಳುವ ಸೂತ್ರದಾರನದೊಂದು ಕವನ
ಸೂತ್ರದ ಬೊಂಬೆಯಾದ ನಮದು ತರಾವರಿ ಕವನ
ಸೂತ್ರದಾರನ ಸೂಚನೆಯಂತೆ ನಡೆಯುವ ನಮದೊಂದು ಕವನ
ಕವನ ರಚನಕಾರನದೊಂದು ಕವನ
ಬರೆದ ಕವನದ ಗೂಡಾರ್ಥವೊಂದು ಕವನ
ಕವನವ ಟೀಕಿಸುವ ಟೀಕಾಕಾರನದೊಂದು ಕವನ
ಒಟ್ಟಾರೆ ಹುಟ್ಟು ಸಾವಿನ ನಡುವೆ ಎಲ್ಲವೂ ಒಂದು ಕವನ

*ಯೋಗೀಶ್ ಪಿ.ಎನ್. ಗೋಣಿಕೊಪ್ಪಲು*

ಕೊಡವ ಕವನ

# ಕಾವೇರಿ ಕುಳಿ



ಕಾವೇರಿ ಕುಳಿಪಕ್ ಕೂಡಿತ್ ಪೋಕನೆಂಗ
ಕುಳ್‌ರ್ ಮರ್‌ಂದಿತ್ ತುದ್‌ಚಿ ಕುಳಿಕನೆಂಗ
ಜುಳುಜುಳುಂದ್ ಪರಿವ ಪೊನ್ನೀರ್‌ಲ್
ಮೈಜಳಂದ್ ಮಜೆತೇವನೆಂಗ

ಬ್ರಹ್ಮ ಕುಂಡಿಕೆಲ್ ಬಗ್ಗಿತೆದ್ದಿತ್
ಬ್ರಹ್ಮಂಡ ಮೋವಳ ತೊಪ್ಪ ಎಂಗ
ಕೆಜ್ಜ ಪಾಪ ಪೋಡ್ ಒಕ್ಕ ನಂದಾಡ್‌ಂದ್
ಕೂಡಿ ನೆನತಿತ್ ಬೋಡನೆಂಗ

ತಾಪಸ ತಪಕೆಜ್ಜ ಬ್ರಹ್ಮಗಿರಿನ
ತೊತ್ತ್ ಪಿರ್‌ಂಜಿ ಪೋಕನಂಗ
ಮೂಂದ್ ಮಡಕುಳ್ಳ ಮುಮ್ಮಡತೋಣಿಕ್
ಆಡಿಪಾಡಿತ್ ಮರ್‌ಂಜತೆಂಗ

ಬಕ್ಕ ಪೊರೆ ಕಂಡಿ ದೇವಾಡೀ ಪಟ್ಟಿ
ಸಾಲೀಯ ಕಟ್ಬೋಳೆ ಕಡ್‌ಂದತೆಂಗ
ನೆಲ್ಲಕ್ಕಿ ನಡುಬಾಡೆ ತೂಕ್‌ಬೊಳಕ್ಕಡಿ
ತೇರ್‌ತ ಕೋಂದಿತ್ ಬೆಚ್ಚತೆಂಗ

ಬೋಡಿತ್ ಪಾಡಿತ್ ಫಲತ್‌ರ ಪಾಪತ್ನ
ಪೊನ್ನ್ ಬೊಳಕಡಿ ಬೂಡುವೆಂಗ
ಬಾವ ಬದ್‌ಕ್‌ಕ್ ಬಂಗ ಬರತಿರಡ್‌ಂದ್
ಬಂದ್ ಕೂಡಿತ್ ಬೋಡುವಂಗ

ಮುಲ್ಲೇಂಗಡ ರೇವತಿ ಪೂವಯ್ಯ
ವಿರಾಜಪೇಟೆ

ತುಳು ಕವನ

# ಸರ್ವೇಶ್ವರಿನ್ ಒರ ತೂಲೆ



ತೂಲೆ ತೂಲೆ ಸತ್ಯದ ಸರ್ವೇಶ್ವರಿ ದೇವಿನ್ ಒರ ತೂಲೆ
ಜಾರೋಂದು ಸೇರೋಂದು ಬಗ್ಗೋಂದು ಬಾವ್ರೊಂದು ದೇವಿನ್ ಒರ ತೂಲೆ
ದಸರ ಸಂಸ್ಕೃತಿನ್ ಬಾಯಿನಿಲ್ಕೆ ಪುಗರೋಂದು ದೇವಿನ್ ಒರ ತೂಲೆ
ನೆತ್ತೆರ್ ಮುರ್ಕುದು ಅವತಾರ ರೂಪೊದ ದೇವಿನ್ ಒರ ತೂಲೆ

ಬೆಂದ್‌ದ್ ಸೊಂದುದು ಬಚ್ಚ್‌ದ್ ಬನ್ನಗ ಮೋಕೆಡೆದ್ಕೋನ್ನ ದೇವಿನ್ ಒರ ತೂಲೆ
ಲೆಪ್ಪು ಬುಳಿಪುಗು ಓಕೊಂದು ಸ್ಮೃತಿನ್ ಕೊರ್ಪುನ ದೇವಿನ್ ಒರ ತೂಲೆ
ಭೂಮಿ ನಿಲ್ಕೆ ನರಮಾನಿ ಆನಗ ಮೂಲೆ ಮೂಲೆಗ್ ಬೊಲ್ಪು ಕೊರ್ಪಿನ ದೇವಿನ್ ಒರ ತೂಲೆ
ಕಡು ಕಷ್ಟದ ಕಾಲೊಡು ಬಂಜಿಗ್ ಉನ್ಪು ಕೊರ್ಪಿನ ದೇವಿನ್ ಒರ ತೂಲೆ

ಬದುಕುನ ತತ್ವೊದ ತಿರ್ಲ್‌ನ್ ತೋಜಾಡ್ ಬಡತನ ದೇಪ್ಪುನ ದೇವಿನ್ ಒರ ತೂಲೆ
ಪೀಳಿಗೆ ಜನ್ಮೊಗು ಯೋಗ್ಯತೆ ಕೊರುದು ಕಾಪುನ ದೇವಿನ್ ಒರ ತೂಲೆ
ದೇವಿನ ದರ್ಶನ ದಸರೊಡು ಮಾತ್ರ ಊರು ಊರುಡು ದೇವಿನ್ ಒರ ತೂಲೆ
ದಸರೊಡು ಮಾಂತ ಒಟ್ಟುಗೆ ಸೇರ್‌ದ್ ಮೀಪಾದ್ ಸುಗಿಪುನ ದೇವಿನ್ ಒರ ತೂಲೆ

ಕಾನೂನ್ ವ್ಯವಸ್ಥೆ ಪ್ರಜಾಪ್ರಭುತ್ವ ನಾಯಕತ್ವಗು ಬದ್ಧತೆ ಕೊರ್ಪಿನ ದೇವಿನ್ ಒರ ತೂಲೆ
ಜೀವದ ಗಂಟ್ ಮಾನಾವುನ ಸತ್ಯದ ಸರ್ವೇಶ್ವರಿ ದೇವಿನ್ ಒರ ತೂಲೆ
ಸುಳ್ಳು ಪಾತೆರೊ ಪನ್ಪಿ ಜನೊತ ಕಣ್ಣ್‌ಗ್ ಮಣ್ಣ್ ಪಾಡುನ ದೇವಿನ್ ಒರ ತೂಲೆ
ಡೊಂಗಿ ಜಯಕಾರ ಬಿರ್‌ದ್ ತಪ್ಪಾದ್ ನಲಿಪುನಕ್ಲೆನ್ ದೃಷ್ಟಿಡ್ ತೂಪಿನ ದೇವಿನ್ ಒರ ತೂಲೆ
ದಸರ ಪರ್ಬದ ಸಂತೋಷೊನು ಇಲ್ಲ್ ಇಲ್ಲ್ ದಿಂಜಾವುನ ದೇವಿನ್ ಒರ ತೂಲೆ
ಜೋಕ್ಲೆಗ್ ದಿಂಜ ವಿದ್ಯಾ ಬುದ್ದಿನ್ ಕೊರ್ಪಿನ ದೇವಿನ್ ಒರ ತೂಲೆ
ಭೂಮಿಡ್ ಬೆನಿಯೆರೆ ಶಕ್ತಿತ ಆಯುದ ಕೊರ್ಪಿನ ದೇವಿನ್ ಒರ ತೂಲೆ
ಮಾಂತ ಶಕ್ತಿನ್ ದಿಂಜಾವೊಂದು ತೇರ್‌ಡ್ ಬತ್ತ್ ಕಾಪುನ ದೇವಿನ್ ಒರ ತೂಲೆ

ಬಿ.ಎಂ. ವಾಸುರ‍್ಯೆ, ಮಡಿಕೇರಿ

# ಇರಡ್ ನೆಕ್ಕೆನಚಿ (ಸ್ವಪ್ನ)

ಕರ್ತ ಬಾವುರಂದ್ ಮಂಗಲ ಕೈಚಿ
ಬೊಳ್ತ ಭಾವು ಕಾಂಗಣೆ
ನಾಡ ಅವಡ ಒಳ್ಲ್ ಒತ್ತೋರ್ಮೆ
ಒಪ್ಪಂದ ವಳೊಪ್ಪಂದ
ಆಯಿಪೋಯಿತಿಂಜತ್.

ಅವಕ್ ನಾನ್ ನಾಕ್ ಅವ
ಚಾಯಿ ಚಾಯಿ
ನಕ್ಕನಾಚಿ ಕಂಡಂಡ್ (ಸ್ವಪ್ನ)
ಬದ್ಕ್ ಸ್ವರ್ಗ
ಕರ್ತ ಬೊಳ್ತ ಬಾವು

ಉರ್ಂಡ್ನನ್ನೇ ಸರಿ ತಿಂಗ
ತಿಂಗ ವಯಿಂಬದಾಂಗ್ ಚಣ್ಣೂರೊಂದ್
ಮಡ್ಲಿಂಜತ್
ಗ್ಡ್ಪ ತೊಡೆರ ನಾನೂ
ಚುರ್ಂಗ್ನೆದೆರ ಅವಳೂ
ತಿಂದಂಡೇ ಉಂಡ್
ಮುದ್ರೆ ಪಜ್ಜಿ ಒಟ್ಟಿ
ಒಲೆ ಕೆಟ್ಟ್ಲಳ್ತಂಡ್
ಊಜಳೆ ಬುಟ್ಟಿ

ಲೆಕ್ಕಾಚಾರ ಪೋಲೆ ಶುರುವೆತ ತಕ್ಕ್
ತಕ್ಕ್‌ಪೋಲೆ ನಡ್ಂದ್ ಪೋಚಿ.
ಖುಶಿ ಖುಶಿಯೋ ಖುಶಿ
ಒಟ್ಟಿ ಮುದರೆ ಪಜ್ಜಿನೇ

ತಿಂದಂಡೇ ಉಂಡ್

ಒಲೆಕಟ್ಟ್‌ಲ್ ಅಳ್‌ತಂಡ್

ಕರ್ತಬಾವುಲ್ ಕೂಡೂವಕಾಗಿಂಜತ್

ನಂಗಾಂದ್ ಬಲ್ಯೋರ್

ಬಲ್ಯೋರ್ ಊಜಳೆ ಬುಟ್ಟತದ್

ಹಂ? ಏಂಥ!?

ದೇಶಕ್ ಸ್ವಾತಂತ್ರ್ಯ ಬಂದದೂ ಇರ್‌ಲ್,

ಒತ್ತೋರ್ಮೆರ ಬದ್‌ಕ್‌ಕೊರ್

ಸಂವಿಧಾನೋ ಆಚಿ.

ನಡ್‌ಪುಕ್ ಬಂದ್‌ಲೆದ್

ಸರೀಕ್ ಇಂದೆಕೂ

ಭಾವುಂಜ ಭಾವುರೊಳ್‌ಲ್‌ಲಾನ

ನಂಗಡ ಒತ್ತೋರ್ಮೆ ಒಪ್ಪಂದ

ಕೂಡ ಕಾಡ್‌ಪಾಲಾಚಿ.

ಅಕ್ಕೊ

ಆಚಲ್ಲಾ!? ನಂಗ ಕೂಡಿ

ಬದ್‌ಕಿಯಂಡ್ ಕಾಲ

ಐಂಬದರ್‌ವದ್

ದೇಶತೂ ಗಡಿ ಸಮಸ್ಯೆ

ಮಕ್ಕಡ ಆಸ್ತಿ ಪಾಸ್ತಿರದೂ....

ಬುದ್ದವನ ಬಾ

ಇಂದೂ ಕರ್ತ ಬಾವು

ಅಲ್ಲಾರಂಡ ವಿಠಲ ನಂಜಪ್ಪ

ಕೆ. ಬಾಡಗ, ಮಡಿಕೇರಿ

## (ಮಲೆಯಾಳಂ) ಅವಳ್ ಕಾವೇರಿ



ಅವಳ್ ಜನಿಚ್ಚು ಬ್ರಹ್ಮಗಿರಿ ಶೃಂಗಯಿಲ್‌ನಿನ್ನುಂ
ವಳರ್‌ನ್ನವಳ್ ಶಾಂತಮಾಯಿ, ರಮಣೀಯಮಾಯ್
ಚೇರುಮವಳಿಲ್ ಪಲ ನೀರ್ ಚಾಲುಗಳುಂ ಇಡವಯಿಯಿಲ್
ವಳರ್‌ನವಳ್, ವಲುದಾಯಿ, ಅಂಜನೆ ಮಹಾ ನದಿಯಾಯಿ
ಪ್ರಸವಿಚ್ಚವಳ್ ಮನೋಹರ ವೆಳ್ಳಚ್ಚಾಟ್ಟಂಜಳೇ
ತಾಲೋಡಿ ವಳರ್‌ತಿಯವಳ್ ಅರುವಿಗಳೆ.

ಋಶಿಮುನಿಗಳ್ ತಪಸ್ಸಿರುನ್ನು ಅವಳುಡೆ ಮಡಿತಟ್ಟಿಲ್
'ದೇವತ' ಎನ್ನು ವಿಳಿಚ್ಚು ಚಿಲರ್ ಅವಳೆ
'ಕಾವು' ಗಳ್ ನಿರ್‌ಮಿಚ್ಚು ಅವಳ್‌ಕಾಯಿ ಪಲರುಂ
ಮರಕ್ಕಾನಾವುಮೋ ಆ 'KRS' ನಮುಕ್ಕೆನ್ನುಂ
ಪರನ್ನು ಪರತ್ತಿ ಆ ನಾಮಂ ಮಂತ್ರಜಪಂಜಳಿಲ್
ಆಶ್ರಯಿಚ್ಚವಳೆ ಆಬಾಲವೃದ್ದಂ ಅಮ್ಮಯಾಯಿ.

ಅವಳ್ ಉಕಂಜುಂಬೋಳ್ ಅವರ್ ಅಟ್ಟಹಾಸಿಚ್ಚು
ಅವಳ್ ಉಣರುಂಬೋಳ್ ಅವರ್ ಆಹ್ಲಾದಿಚ್ಚು
ಕರ್‌ಶಕರ್‌ಕೆನ್ನುಂ ಆಶ್ರಯ ದೇವದಯಾಯವಳ್
ದಾಹ ಜಲಮಾಯಿ, ರುದ್ರಮಾಯಿ, ಕಾವ್ಯ ಬಿಂದುವಾಯಿ
ಪೊನ್‌ವಿದಕ್ಕುಂ ಬೀಜಮಾಯಿ, ಅವಳೇ ತಲೋಡಿಯವರ್
ಮೈಲುಗಳ್ ತಾಂಡಿ ಲಕ್ಷ್ಯಂ ವರಚ್ಚವಳ್ ಬಂಗಾಳ್ ಗರ್‌ಬತ್ತಿಲ್

ಮಂದಸ್ಮಿದಂ ತೂಗಿಯವಳ್ ಗ್ರೀಷ್ಮ ಶೈತ್ಯಂಜಳಿಲ್
ಮಂದಮಾರುದನೀ ತಾಲೋಡಿಯವಲ್ ವಸಂತ ಋತುವಿಲ್
ಓಲಗನಗಾಂ ವಟ್ಟಿಯವಳಿಲ್ ವೇನಲ್ ಅವಧಿಯಿಲ್
ನವ ವಧುವಿನಾಲ್ ಅನಿಞ್ಞೊರುಂಜಿ ಮಯಕ್ಕಾಲಂಜಳಿಲ್
ಆಶಿಕ್ಕಾಂ ನಮುಕ್ಕವಳಿಲ್ ಅದಿ ಜೀವಿಕ್ಕಾನ್
ತಣಲೇಗಾನ್ ಆಯಿರಮಾಂ ಸಹಸ್ರಾಬ್ದತ್ತಿಲ್.

**ಮೊಹಮ್ಮದ್ ಜಹೀರ್, ಸೋಮವಾರಪೇಟೆ**

## ವ್ಯಥೆ



ನಾನೊಂದು
ಕಡಲು ಸೇರದ ನದಿ
ಸಿಗದ ಕಡಲಿಗಾಗಿ
ಹಂಬಲಿಸುತ್ತ, ಅರಸುತ್ತ
ಎಳೆತ, ಸೆಳೆತ, ವಾರಿಳಿತಗಳಲ್ಲೇ
ನನ್ನ ಬದುಕು
ಕಳೆದು ಹೋಗುತ್ತಿದೆ

## ಬೇರು

ನೀನು ಗೊಬ್ಬರ
ನಾನು ನೀರು
ಇಳಿದಿದೆ
ಪಾತಾಳಕ್ಕೆ
ಪ್ರೀತಿ ಬೇರು

## ವಿಪರ್ಯಾಸ

ಇಲ್ಲೊಬ್ಬಳು
ಸಭೆಯಲ್ಲಿ
ಮಹಿಳಾ ಶೋಷಣೆಯ ಬಗ್ಗೆ
ಭಾಷಣ ಬಿಗಿಯುವಳು
ಮನೆಯಲ್ಲಿ
ಎಲ್ಲಾ ಕೆಲಸಗಳನ್ನು
ಗಂಡನಿಂದಲೇ ಮಾಡಿಸುವಳು.

ಸಹನಾ ಕಾಂತಬೈಲು

# ನೀನಾಗುವೆಯಾ



ಹುಣ್ಣಿಮೆಯಾ ಚಂದಿರನಿಗೆ
ಮಿನುಗುವ ನಕ್ಷತ್ರಗಳಿಗೆ
ಕವಿದ ಕಾರ್ಮೋಡ ಸರಿಸಲು
ಬೆಳದಿಂಗಳ ಶಶಿ ನೀನಾಗುವೆಯಾ

ಮುಂಜಾವಿನ ಹನಿಗಳ ಲೀಲೆಗೆ
ಕರಗುವ ನೀರ ಇಬ್ಬನಿಗೆ
ಮುತ್ತುಗಳ ಪೋಣಿಸುವ
ನೇಸರ..... ನೀನಾಗುವೆಯಾ

ಹಕ್ಕಿಗಳ ಚಿಲಿಪಿಲಿ ನಾದಕ್ಕೆ
ಪ್ರಕೃತಿ ರಮಿಸಿದ ಚೆಲುವಿಗೆ
ಕಂಗೊಳಿಸುವ ಕಾನನಕ್ಕೆ
ಹರಸುವ ಹಸಿರು ನೀನಾಗುವೆಯಾ

ದುಂಬಿ ಹೀರುವ ಮಕರಂದಕೆ
ಜೇನಸವಿಯ ಸರಿಗಮಕೆ
ಝೇಂಕರಿಸುವ ಸ್ವರ ಮಾಧುರ್ಯಕೆ
ಅರಳುವ ಹೂವು ನೀನಾಗುವೆಯಾ

ಕವಲೊಡೆದ ಹಾದಿಯಲಿ
ನಾದ ನಿನಾದದ ಉನ್ಮಾದದಲಿ
ಕನಸುಗಳು ಬರಿದಾಗಿದೆ
ಮತ್ತೆ ಚಿಗುರಿಸುವ ಚೈತ್ರ ನೀನಾಗುವೆಯಾ

**ಹೇಮಲತಾ ಪೂರ್ಣ ಪ್ರಕಾಶ್**
**ಮಡಿಕೇರಿ**

(ಅರೆಭಾಷಾ ಕವನ)

# ನೆನ್‌ಪ್‌ಗಳೇ ನೀವೆಷ್ಟೊಂದು ಲಾಯ್ಕ...



ಬಾಳ್‌ನ ಪುಟಗಳ ತಿರ್‌ಗಿಸಿ ಹಾಕ್‌ಕನ
ನಾನ್ ಮುಂದೆ ತಾನ್ ಮುಂದೆ
ತೇಳಿ ಓಡಿ ಬರುವ
ನೆನ್‌ಪ್‌ಗಳೇ ನೀವೆಷ್ಟೊಂದು ಲಾಯ್ಕ.

ಮಮತೆ -ವಾತ್ಸಲ್ಯ ತೋರ್ಸಿದ ಅಮ್ಮನ ನೆನ್‌ಪ್
ಪ್ರೀತಿಂದ ಎತ್ತಿ ಮುದ್ದಾಡ್ಸಿದ ಅಪ್ಪನ ನೆನ್‌ಪ್.
ಒಡಹುಟ್ಟಿದವರ ಪ್ರೀತಿಲಿ,
ಅಕ್ಕ-ತಂಗೆ, ಅಣ್ಣ-ತಮ್ಮಂದ್‌ರ ನೆನ್‌ಪ್
ಕೂಡಿ ಆಟ ಆಡ್‌ದ ಗೆಳೆಯ ಗೆಳತಿಯರ ನೆನ್‌ಪ್
ಇವೆಲ್ಲ ಹಳೆದಾದ್‌ರೂ
ನೆನ್‌ಪ್‌ಗಳೇ ನೀವೆಷ್ಟೊಂದು ಲಾಯ್ಕ.

ಮುಗ್ಧತೆಲಿ ಕಳ್‌ದ್ ಹೋದ ಬಾಲ್ಯದ ನೆನ್‌ಪ್
ಕೈಕೈ ಹಿಡ್‌ಕಂಡ್ ಸ್ಕೂಲ್‌ಗ್ ಹೋದ ನೆನ್‌ಪ್.
ಪರೀಕ್ಷೆ ಬಾಕನ ಹೆದ್‌ರಿಕಂಡ್ ಬರ್‌ದ ನೆನ್‌ಪ್,
ಫಲಿತಾಂಶದೊಟ್ಟಿಗೆ ಖುಷಿನ ಹಂಚಿಕಂಡ ನೆನ್‌ಪ್.
ಬ್ಯಾಜರಾಕನ ತಡ್‌ಕಣಿಕಾಗದೆ ಮರ್‌ಟ ನೆನ್‌ಪ್.
ಖುಷಿ ಆಕನ ಕಣ್ಣ್‌ಲಿ ನೀರ್ ಬರುವಷ್ಟ್,
ನೆಗಾಡ್‌ದ ನೆನ್‌ಪ್

ಸಿಟ್ಟ್ ಬಾಕನ ಸುಮ್ಮ-ಸುಮ್ಮನೆ ಬೈದ ನೆನ್‌ಪ್.
ಇವೆಲ್ಲ ಕಳ್‌ದ್ ಹೋದರೂ,
ನೆನ್‌ಪ್‌ಗಳೇ ನೀವೆಷ್ಟೊಂದು ಲಾಯ್ಕ.
ಓದುದರ ಮುಗ್‌ಸಿ ಹೋಕನ
ಗೆಳೆಯ ಗೆಳ್‌ತಿಯರೊಟ್ಟಿಗೆ
ಆಟೋಗ್ರಾಫ್‌ನ ಬರ್‌ಸಿಕಂಡ ನೆನ್‌ಪ್

ಆ ಕೊನೆ ಕ್ಷಣಲಿ ತಿಳಿಯದೆ
ಕಣ್ಣೀರ್ ಹರ್‌ದ್ಹೋದ ನೆನ್‌ಪ್
ಎಲ್ಲವರ ಬುಟ್ಟ್ ನಾನ್ ಒಬ್ಬಂಟಿಯಾದ ನೆನ್‌ಪ್
ನಂಗೆ ಈಗಳೇ ಗ್ಯಾನ ಆದೆ
ತೆಗಿಯಕನ ನೆನ್‌ಪ್‌ತೇಳುವ ಪುಸ್ತಕನ
ಪುಟಗಳ ತುಂಬಾ ಕಾಂಬೊದು ಬರಿಯ
ನೆನ್‌ಪ್‌ಗಳೇ ಆದರೂ,
ನೆನ್‌ಪ್‌ಗಳೇ ನೀವೆಷ್ಟೊಂದು ಲಾಯ್ಕ.

**ಕಡ್ಲೇರ ಜಯಲಕ್ಷ್ಮಿ ಮೋಹನ್ ಕುಮಾರ್**
**ಬೆಟ್ಟಗೇರಿ.**

# ಜಲತಾರೆ - ಕಾವೇರಿ

ಕೊಡಗಿನ ಉದರದಲಿ
ಉಸಿರಿನ ಹಸಿರಿನಲಿ
ಹಸಿರಿನ ಗುಚ್ಛದಲಿ
ಬ್ರಹ್ಮಗಿರಿಯೊಂದು ಶಿಖರ
ಅದುವೇ ಜಲತಾರೆ ಅಂಬರ
ಬ್ರಹ್ಮಗಿರಿ ಶಿಖರದಲಿ
ಶಿಖರದ ಸರಣಿಯಲಿ
ಸರಣಿಯ ತಪ್ಪಲಲಿ
ಮಿನುಗಿತೊಂದು ತಾರೆ
ಅದುವೇ ಜಲತಾರೆ
ಪ್ರಕೃತಿಯ ಮಡಿಲಿನಲಿ
ಬ್ರಹ್ಮಗಿರಿ ತಪ್ಪಲಲಿ
ತಪ್ಪಲಿನ ಕುಂಡಿಕೆಯಲಿ
ಜನಿಸಿತೊಂದು ನದಿ
ಅದುವೇ ಜೀವನದಿ- ಕಾವೇರಿ
ಬೆಟ್ಟಗಳ ಒಡಲಿನಲಿ
ಕಾಣದ ಮಾರ್ಗದಲಿ
ಭಾಗಮಂಡಲದ ಕನ್ನಿಕೆ ಸುಜ್ಯೋತಿಯಲಿ
ಸಂಗಮವಾಯಿತಾ ಕಾವೇರಿ
ಕೊಡಗಿನ ಪ್ರಕೃತಿಯ ತಾಣದಲಿ
ಜೀವ ಜಲವಾದ ನದಿಯಲಿ
ಪರಿಶುದ್ಧ ನೀರಿನಲಿ
ದಣಿವಾರಿಸಿಕೊಳ್ಳುವ ನಾವೆಷ್ಟು ಧನ್ಯರು!!
ನಾವೆಷ್ಟು ಪಾವನರು!

ಚಾರ್ಲ್ಸ್ ಡಿಸೋಜ, ವಿರಾಜಪೇಟೆ.


# ಆ ಮರ ಈ ಮರ



ಓ... ಪ್ರೇಯಸಿ
ಕಾತೂ ಸತ್ಯ
ಮಳೆಯೂ ಸತ್ಯ
ಪೊಳೆಯೂ ಸತ್ಯ
ಸಾಗರವೂ ಸತ್ಯ
ಓ... ಪ್ರೇಯಸಿ
ಭೂಮಿಯೂ ಸತ್ಯ
ಕುಂದೂ ಸತ್ಯ
ಪರ್ವತವೂ ಸತ್ಯ
ಅಂದ್ ನಾಡ ಮನಸ್‌ಲೊಳ್‌ಂಜಿತ್
ನಾಡ ನೆಂಞಿಲೊಳ್‌ಂಜಿತ್
ನೀನ್...ಇಂದ್ ಅಸತ್ಯ
ಓ.... ಪ್ರೇಯಸಿ
ಆ ದಿವಸತ್
ಸತ್ಯತ್‌ರೊಳ್‌ಲಿಂಜಿತ್
ನೀಡ ಸತ್ಯ
ಈ ದಿವಸ
ಅಸತ್ಯ ಆಯಿ
ಎನ್ನಂಗ್....?
ಇಂದ್ ನಾನ್ ಸತ್ಯ ತಡಿಯಾಯಿತ್
ಇಪ್ಪಿ ಕಾಡ್‌ರ ಮರವಾಯಿತ್
ಉಸಿರಾಯಿತ್ ಉಳಿಕೆ ಮಾಡೊಂಡು
ಸತ್ಯತ್‌ರ ಮಾನವ ವಂಶತ್‌ನ.
ಇದೇ ಸತ್ಯತ್‌ರ ಆ ದಿನ ಆ ಮರ
ಅಸತ್ಯತ್‌ರ ಈ ದಿನ ಈ ಮರ.

ಮಾರಣ್ಣ ದಿಲೀಪ್‌ಕುಮಾರ್
ಪತ್ರಕರ್ತ, ವಿರಾಜಪೇಟೆ

# ಆಯೆಗ್ ಸೋಲ್ಮೆಲು



ಕಡಲ್‌ದಬರಿತ ಬಾನೊದ ಮಿಂಚ್‌ದ
ಬೊಲ್ಪುಡು ಮಿನುಗುನ ಪನಿ ಯಾನ್
ಪಾರನೇ ಇಜ್ಯಂದೆ ಅಪಾರೊ ಮಹಿಮೆದ
ಕಣ್ಣ್‌ಗ್ ತೋಜ್ಯಂದ್‌ನ ಹರಿ ಈರ್
ಅಂಚಿಂಚಿದ ಪ್ರಕೃತಿದ ಮಧ್ಯೋಡು
ಪದರ್‌ದ್‌ಂಡ್ ಬಗೆಬಗೆದ ಪೂರಾಸಿ
ಕತ್ತಲೆದೆಪ್ಪುನ ಸೂರ್ಯನ ಕಿರಣೊಗು
ಕರಗ್‌ದ್ ಬೂರ್ದ್ದಂಡ್ ಹಿಮರಾಶಿ
ಪುಟೊಂದುನ ದೇವೆರ್ ಪಜರ್‌ಕೊರಂದಿಪ್ಪಯ
ಈ ಗಾದೆ ಏಪಗ್‌ಲ ಸತ್ಯ
ಆಯನಣತಿ ಇಪ್ಪಂದೆ ಅಲುಗಾಡುಜ್ಜಿಯೇ
ಈ ಭೂಮಿಡಿಪ್ಪುನ ಪ್ರತಿಯೊಂಜಿ ಜೀವಿ ನಿತ್ಯ
ಮಾಯದ ಲೋಕೊಡು ದಿನೋಲ ಸೊರಗುವ
ನಮೊ ಅಸಹಾಯಕತೆದ ಪ್ರತಿರೂಪೊಲುಯೇ
ನಮ್ಮ ಕೈಟ್ ಒವ್ವುಲಾ ಇಜ್ಜಂದ್‌ನ
ಅಂಚ ತೆರಿದಿನಕ್‌ಲೇ ಅಪರೂಪೊಯೇ
ಆಯನೆದ್‌ರ್ ಬಗ್ಗುಂಡು ಚಂಡಮಾರುತೊ
ಬಗ್ಗ್‌ದ್ ಉಂತುಂಡು ಕಡಲ್‌ದ ಶಕ್ತಿ
ಕಡಲ್ ಸುಮಾರ್ ಪ್ರಾಣಿಲೆಗ್ ಆಶ್ರಯದಾತ
ಮಾಂತೆರ್ದ್‌ಲ ಹೆಚ್ಚಾದ್ ಉಂಡು ಭಯ ಭಕ್ತಿ.

ನೀರಬಿದಿರೆ ನಾರಾಯಣ
ಮಡಿಕೇರಿ

# ಚಿಂತೆ



ಚಿಂತೆಯೆಂಬುವುದಂತೆ,
ಸಂತೆಯಲಿ ಸಿಗದಂತೆ.
ಆ ಚಿಂತೆ ಸಂತೆಯಲಿ,
ಜೀವನವೇ ಕಹಿಯಂತೆ.

ಯಾರಿಗರಿವಿಲ್ಲದೆಯೇ,
ಅದು ಬರುವುದದರಂತೆ
ಈ ಜಗದೊಳ್ ಯಾರನ್ನ,
ಅದು ಬಿಡದು ಅಂತೆ.

ಅದರೊಳಗೆ ತೊಳಲಾಡಿ,
ಹೊರ ಬರುವುದೇ ಚಿಂತೆ.
ಆದರೂ ಮನುಜನಿಗೆ,
ಸ್ವಾರ್ಥ ಬದುಕಿನ ಚಿಂತೆ.

ರಾಜಾದಿ ರಾಜರನು,
ಬೆಂಬಿಡದ ಚಿಂತೆ.
ದೇವಾಧಿ ದೇವರನು,
ಕುಣಿಸಿ ತಣಿಸಿದ ಚಿಂತೆ.

ಮನುಜ ಮಹನೀಯರನು,
ಅದು ಬಿಡದು ಅಂತೆ.
ಅದಕಾಗಿ ಓ ಮನುಜ,
ಪಡಬೇಡ ಚಿಂತೆ.

ಸಂಸಾರ ಸಾಗರದೋಳ್, ಅದು ನುಸುಳುವಂತೆ.
ಆ ಕೂಪದೊಳು ಈಜಿ, ದಡ ಸೇರುವಂತೆ
ಚಿಂತೆಯನು ಗೆಲುವವನೇ, ಸರ್ವಜ್ಞನಂತೆ.

**ಕೆ.ಬಿ. ಟಾಟಾ ಚಂಗಪ್ಪ**
**ವಿರಾಜಪೇಟೆ.**

# ಕನ್ನಡದ ಕಾಜಾಣ



ಕಾಜಾಣ ಹಕ್ಕಿ ಓಜಾಣ ಹಕ್ಕಿ
ಮಲೆನಾಡ ಹಕ್ಕಿ ಕುರನಾಡ ಹಕ್ಕಿ
ಕುಪ್ಪಳ್ಳಿ ಸುತ್ತ ಕುಪ್ಪಳಿಸಿದ ಹಕ್ಕಿ
ನೀನೆಲ್ಲಿ ಹೋದೆ ಕನ್ನಡದ ಹಕ್ಕಿ ||ಕಾ||

ಸಹ್ಯಾದ್ರಿ ಮಡಿಲ ಕವಿಶೈಲದಲ್ಲಿ
ಅಂಬೆಗಾಲಿಟ್ಟ ಓ ಪುಟ್ಟಪ್ಪ ಹಕ್ಕಿ
ಉದಯ ರವಿಯಲ್ಲಿ ಜ್ಞಾನದ ಗಣಿಯಾಗಿ
ಜ್ಞಾನಪೀಠವ ನೀ ಮಡಿಗೇರಿಸಿದ ಹಕ್ಕಿ ||೨||

ಮಲೆಗಳ ಮಡಿಲಲ್ಲಿ ಮದುಮಗಳ ಕಂಡು
ಕಾನೂರಿನಲ್ಲಿ ಹೆಗ್ಗಡತಿಯ ಹಡೆದು
ಬಾನಂಗಳದಿ ಹಾರಿದ ಖಗಗಳ ಸಾಲಲ್ಲಿ
ದೇವರ ರುಜುಕಂಡ ಓಜಾಣ ಹಕ್ಕಿ ||ಕಾ||

ಶೂದ್ರಾತಿಶೂದ್ರನಿಂದ ತಪವಗೈಸಿದ ನೀನು
ಜಲಗಾರನಿಂದ ಜಗದಕಣ್ ತೆರೆಸಿದ ಹಕ್ಕಿ
ಸಾವಿತ್ರಿಯ ಛಲದಿಂದ ಯಮನಿಗೆ ಸೋಲುಣಿಸಿ
ಪಾಂಚಜನ್ಯವನೂದಿ ವಿಶ್ವಮಾನವನಾದೆ,

ಮಕ್ಕಳ ಮನದಲ್ಲಿ ನೀ ಕಿಂದರಿ ಜೋಗಿ
ಕನ್ನಡಾಂಬೆಯ ಒಡಲಲ್ಲಿ ಜ್ಞಾನ ಪೀಠದ ಭೋಗಿ
ಸಿರಿಗನ್ನಡ ಕಂಪಿನ ಕುವೆಂಪುವಾಗಿ
ಅನಿಕೇತನವಾಗಿ ! ಅಮರನಾದ ಹಕ್ಕಿ ||ಕಾ||

ಬಿ.ಸಿ. ಸಿದ್ದರಾಜು ಬೆಳ್ಳಪ್ಪ
ಮದೆನಾಡು

# ಮುಟ್ಟಾಗದವಳು



ಕೆಂಪು ದೀಪದ ಬೀದಿಯೊಳಗಿನ
ಮುಟ್ಟಾಗದ ಕನ್ಯೆಯೊಬ್ಬಳು ನನ್ನ
ಕ್ಯಾನ್ವಾಸನ್ನು ಆವರಿಸಿದ್ದಾಳೆ.

ಉತ್ತರಿಸಲಾರದ ಪ್ರಶ್ನೆಯೊಂದನ್ನು
ಎದೆಗವಚಿಕೊಂಡು ನನ್ನ ಕುಂಚಕ್ಕೆ
ತನ್ನ ಕಣ್ಣೀರ ಲೇಪಿಸುತ್ತಾಳೆ.

ಕರಿ ಕಗ್ಗತ್ತಲ ಸಾಮ್ರಾಜ್ಯದ ಕುರುಡಿ
ನಭೋಮಂಡಲಕ್ಕೆ ಇಣುಕಿ
ಹಿಡಿ ಬೆಳಕಿಗಾಗಿ ರಾಶಿ ಚುಕ್ಕಿಗಳೆದುರು
ಬೆತ್ತಲಾಗಿ ಕೈಯೊಡ್ಡುತ್ತಾಳೆ.

ಹೊಸ್ತಿಲು ದಾಟುವ ದಾವಂತದಲ್ಲಿ
ದಿಗಿಲುಗಳ ಬೊಂತೆಕಟ್ಟಿ ತೂರುತ್ತಾಳೆ
ಬೋಳೆ ಹುಡುಗಿ ಬೊಗಸೆ ತುಂಬ
ಕನಸ ಕಟ್ಟಿ ಪಲ್ಲಕ್ಕಿಯೇರುತ್ತಾಳೆ.

ಶ್ರಾವಣದ ಸಂಜೆಯಲ್ಲಿ ಹಿಡಿಯುವ
ಸೋನೆಮಳೆಯ ಜಿಟಿಜಿಟಿ ಶಬ್ದದೊಳಗೆ
ಜಿನುಗುವ ಮೊಗ್ಗಿನ ಮುಗುಳು ನಗೆ
ಕಣ್ಣು ತುಂಬ ಹಸಿಗನಸ ಹೊದ್ದು


ಆಚೆ ಈಚೆಗಷ್ಟು ಒಗೆದು ತನ್ನ
ಸವೆದು ಹೋದ ಕುಂಚದಿಂದ
ಗಾಳಿಗೆ ಬಣ್ಣ ಹಚ್ಚುವ ಪೋರಿ ಈಕೆ

ತನ್ನ ಮೇಲಿನಿಂದ ಕೆಳಗೆ ನೋಡಿ
ಮೂತಿ ಸಿಂಡರಿಸಿ, ಆಡಲು ಬಾರದ
ಹುಡುಗಿಯ ಜೊತೆ ಒಂದಷ್ಟು ಹೊತ್ತು
ಕುಂಟೆಬಿಲ್ಲೆ ಆಡಲು ಹಾತೊರೆಯುವಳು
ಮುಟ್ಟಾಗದ ಕೆಂಪು ದೀಪದ ಕನ್ಯೆ ಇವಳು

ಕೆಂಪು ದೀಪದ ಬೀದಿಯೊಳಗಿನ
ಮುಟ್ಟಾದ ಕನ್ಯೆಯೊಬ್ಬಳು ನನ್ನ
ಕ್ಯಾನ್ವಾಸನ್ನು ಆವರಿಸಿದ್ದಾಳೆ.
ಮುಟ್ಟಾಗದ ನಂತರವೂ ಕೂಡ
ಇವಳು ಇಲ್ಲೇ ಉಳಿಯುತ್ತಾಳೆ.

**ಮಣಜೂರು ಶಿವಕುಮಾರ್**
ಸೋಮವಾರಪೇಟೆ

# ഇന്നത്തെ പത്രവാർത്ത



ചൂടുള്ളൊരു വാർത്തയ്ക്കായ് പരതി,
ഞാൻ പത്രത്താളുകളിൽ
കാലക്കേടിനു കണ്ണിൽപ്പെട്ടു,
മന്ത്രി മരങ്ങോടൻമാർ
ഭൂമിയിൽ ഹൈശ്വര്യങ്ങൾ, സമ്പാദ്യങ്ങൾ പൊലിപ്പിച്ചീടാൻ
ഏതോ ശിവശങ്കര പാദങ്ങൾ താണു വണങ്ങും ചിത്രം

പ്രജകൾ നമിക്കുന്നു പാർട്ടിപൊലിപ്പിക്കാൻ
അവിടെ പിന്നെ അണികൾക്കുള്ളിൽ ആഹ്ലാദം തന്നെ!
ശംഭോ ! ശിവശംഭോ ! ശിവശംഭോ ! ശംഭോ !
ശംഭോ ! ശങ്കര ! ശിവ ! ശിവശങ്കര ! ഹര ഹരോ ! ശംഭോ!

പ്രതിപക്ഷത്തിൽ കുരമ്പോഠവർ ഉൾപ്പേജോത്തിൽതീ
അണയാൻ കാത്തു വിഴുങ്ങാൻ നില്പു ഖജനാവിൽ ബാകി !
വികസനമെന്നും മന്ത്രികൾ കൂട്ടാൻ മാത്രം രാജ്യത്തിൽ
പതിവായി സത്യ പ്രതിജ്ഞചെയ്യും ചിത്ര വിചിത്രങ്ങൾ !

സത്യം ചെയ്തവർ തൻ സത്യങ്ങൾ കീഴ്മേൽ മറിയുംമ്പോൾ
വനസമ്പത്തും നികുതിയും അനവധി വരുമാനങ്ങളും
എവിടെ പോകുന്നു? ഒരു പിടിയുണ്ടല്ലോ
രാജ്യത്തിന്റെ പുരോഗതിക്കായ് പലഭണ്ഡാരങ്ങൾ !

ശിവ ! ശിവ ! ആർക്കറിയാം, ശിവശങ്കര രഹസ്യം
ശംഭോ! ശങ്കര ! പൊതുജനമറിയാ പരമരഹസ്യങ്ങൾ !
മറ്റൊരു പേജിൽ കൂട്ടുമുടിച്ചവർ തൽതീര തീരുന്നു
അതിനിടയിൽ ചില കാമം മൂത്തവർ മുഖവാടമണിയുന്നു

മഹിളകളൊരുപിടി ഇവരുടെ പിടിയിൽ കരിവളപൊട്ടിച്ചു
അധികാരത്തിൽ ആർഭാടങ്ങളിലുഴരി പ്പിടയുന്നു
അവസാനം കേസ്സും, കോടതി വാതിലും
അറിയാ ഗർഭമെടുത്തിറക്കാൻ ഡി.എൻ.എ. ടെസ്റ്റും!

ശിവ ! ശിവ ! ശങ്കരനേ ! നീയറിയാ രഹസ്യം
ഇതുപോലൊരു നിരന്നുകിടപ്പു പത്രത്താളുകളിൽ !
തൊട്ടൊരു ലൈനിൽ ഭീകരവാദികൾ കുത്തി മറിക്കുന്നു
ബോംബും, സൈനേഴടും തോകും കൊണ്ടിടിവെട്ടിക്കുന്നു

സായുധ സേനകൾ ഭാരതമക്കൾ ചിതറി പിടയുന്നു
രാഷ്ട്രീയത്തിൽ മേലാത്തുമ്മർ മീശപിരിക്കുന്നു !
ആകാശം മുട്ടെ ഭീകരർ വളരുന്നു
അവരെകാളും ഭീകരരെല്ലാം നമ്മുടെ സാരഥികൾ

ശിവ ! ശിവയെന്താണീ പത്ര വിശേഷങ്ങൾ
പൊതുജന നന്മതയ്യൊരു വരിപോലും കാണാനില്ലല്ലോ !

**ദേവിദാസ് കെ.പി.**
ഗോണികൊപ്പൽ

'ಕವನ ದೀಪಿಕಾ' ದಸರಾ ಬಹುಭಾಷಾ ಕವಿಗೋಷ್ಠಿ - 2010 ರಲ್ಲಿ ವಾಚಿಸಿದ ಬಹುಭಾಷಾ ಕವನ, ಚುಟುಕುಗಳ ಸಂಕಲನ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪ್ರಾಯೋಜಕತ್ವದಲ್ಲಿ ಸುಂದರವಾಗಿ ಮೂಡಿ ಬಂದಿದೆ.

ಕನ್ನಡ ಸಂಸ್ಕೃತಿ ಇಲಾಖೆ ಗೋಣಿಕೊಪ್ಪ ದಸರಾವನ್ನು ಪ್ರಾಯೋಜಿಸುತ್ತಿದ್ದು, ಕಾವೇರಿ ದಸರಾ ಸಮಿತಿ(ರಿ) ಜನೋತ್ಸವವಾಗಿ ಆಚರಿಸುತ್ತಾ ಬಂದಿದೆ. ಈ ಜನೋತ್ಸವದ ಸಂದರ್ಭದಲ್ಲಿ ಕಾವೇರಿ ದಸರಾ ಸಮಿತಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬಹುಭಾಷಾ ಕವಿಗೋಷ್ಠಿಯನ್ನು ಆಯೋಜಿಸಿ ಸಾಹಿತಿಗಳಿಗೆ ಉತ್ತಮ ವೇದಿಕೆ ನೀಡುತ್ತಿದೆ.

ಈ ಕವಿಗೋಷ್ಠಿಯ ಕವನ ಚುಟುಕುಗಳನ್ನು ಸುಂದರವಾದ 'ಕವನ ದೀಪಿಕಾ' ಸಂಕಲನದ ಮೂಲಕ ಆಕರ್ಷಕವಾಗಿ ಹೊರತರಲು ಸಹಾಯ ನೀಡಿದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು, ರಿಜಿಸ್ಟ್ರಾರ್ ಹಾಗೂ ಸರ್ವ ಸದಸ್ಯರುಗಳಿಗೆ ಹೃದಯಪೂರ್ವಕ ಧನ್ಯವಾದಗಳು.

ಮುಲ್ಲೇಂಗಡ ಮಧೋಶ್ ಪೂವಯ್ಯ
ಅಧ್ಯಕ್ಷರು
ಕೊಡಗು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್

Printed at : Sri Krishna Computers & Printers, Madikeri. Ph : 224919, Mob : 94481 35592